ಲೋಕಹಿತಂ ಮಮ ಕರಣೀಯಂ

# ಸೇವಾ ದಿಶಾ

ಹಿಂದು ಸೇವಾ ಪ್ರತಿಷ್ಠಾನದ ವಾರ್ತಾಪತ್ರಿಕೆ

ಸಂಪುಟ : 4 ಸಂಚಿಕೆ : 10 ಜುಲೈ –2009 ಪುಟಗಳು : 8 ಬೆಲೆ : 5–00

## ವಿಶೇಷ ವ್ಯಕ್ತಿಗಳಿಗೆ ವಿಶಿಷ್ಟ ತಾಣ – ಧರಿತ್ರಿ

ನರಸೀಪುರ : ವಿಶೇಷ ಮಕ್ಕಳ ಭವಿಷ್ಯವನ್ನು ಸ್ವಾವಲಂಬಿಯಾಗಿಸುವ ಸದುದ್ದೇಶ ದಿಂದ ಪ್ರಾರಂಭವಾದ ಯೋಜನೆ, "ಧರಿತ್ರಿ" ಹಾಗೆಯೇ ಸುತ್ತಮುತ್ತಲ ಗ್ರಾಮಗಳಲ್ಲಿರುವ ವಿಕಲಚೇತನ ಮಕ್ಕಳನ್ನು ಸಬಲರನ್ನಾಗಿ ಮಾಡುವ ಪ್ರಯತ್ನವು ನಡೆಯುತ್ತಿದೆ. ವಿಶೇಷ ವ್ಯಕ್ತಿಗಳ ವಸತಿ ನಿಲಯದ ಮೊದಲ ಹಂತದ ಕಟ್ಟಡ ಉದ್ಘಾಟನೆಯು ದಿನಾಂಕ 28.06.2009ರ ಭಾನುವಾರದಂದು ನಡೆಯಿತು.

ಉದ್ಘಾಟನೆಯನ್ನು ಬೆಂಗಳೂರಿನ ರೊಟೇರಿಯನ್ನರಾದ ಶ್ರೀ ಮಾನಂದಿ ಎನ್. ಸುರೇಶ್‌ರವರು ನೆರವೇರಿಸಿಕೊಟ್ಟರು. ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಅವಶ್ಯಕವಿರುವ ಇಂತಹ ಸೇವಾ ಕಾರ್ಯಕ್ಕೆ ರೋಟರಿ ಆರ್ಚರ್ಡ್ಸ್‌ನವರು ಜೋಡಿಸಿಕೊಂಡಿರುವದು ಶ್ಲಾಘನೀಯ ವಾದ ಕೆಲಸವೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೊಟೇರಿಯನ್ ಶ್ರೀ ಕೆ.ಎನ್. ಗೋವಿಂದರಾಜುರವರು ವಹಿಸಿದ್ದರು. ತಮ್ಮ ಧರ್ಮಪತ್ನಿಯ ನೆನಪಿನಲ್ಲಿ 4 ಲಕ್ಷ ರೂಪಾಯಿಗಳನ್ನು ದೇಣಿಗೆ ನೀಡಿ, ಕಟ್ಟಡಕ್ಕೆ ಭದ್ರವಾದ ಆರ್ಥಿಕ ಸಹಾಯ ನೀಡಿ ಸಹಕರಿಸಿದ್ದಾರೆ, ಇದೊಂದು ಉತ್ತಮ ಕಾರ್ಯ ವೆಂದು ಭಾವಪೂರ್ಣವಾಗಿ ಸ್ಮರಿಸಿದರು. ಮುಖ್ಯ ಅತಿಥಿಗಳಾಗಿದ್ದ ಶ್ರೀಧರ ಸಾಗರ್‌ರವರು ಸೇವಾಕಾರ್ಯಗಳ ಮಹತ್ವ ಮತ್ತು ಅದರಿಂದಾದ ಸಾಮಾಜಿಕ ಬದಲಾವಣೆಗಳನ್ನು ಸಭಿಕರ ಗಮನಕ್ಕೆ ತಂದರು.

ರೊಟೇರಿಯನ್‌ರಾದ ಶ್ರೀಯುತ ರಾವ್ ಸಾಹೇಬ್‌ರವರು ಪ್ರತಿವರ್ಷ ತಮ್ಮ ಧರ್ಮಪತ್ನಿಯೊಂದಿಗೆ ಕಾಲ್ನಡಿಗೆಯಲ್ಲಿ ತಿರುಪತಿಗೆ ಹೋಗಿ ಶ್ರೀ ವೆಂಕಟೇಶ್ವರ ದರ್ಶನ ಪಡೆಯುವುದು ವಾಡಿಕೆ. ಈ ಪದ್ಧತಿಯನ್ನು ಕಳೆದ 9 ವರ್ಷಗಳಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಈ ವರ್ಷದ ಕಾಲ್ನಡಿಗೆಗೆ ಸೇವಾದೃಷ್ಟಿಕೋನ ಜೋಡಿಸಿಕೊಂಡು ಪಾದಯಾತ್ರೆ ಮಾಡಿದ್ದಾರೆ. ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಒಂದು ಕಿ.ಮೀ. ನಡಿಗೆಗೆ 2,000 ದಂತೆ ತಮ್ಮ ಪರಿಚಯದವರಿಂದ ಪಡೆದುಕೊಂಡು ಒಟ್ಟು ಸಂಗ್ರಹವಾದ 2ಲಕ್ಷ ರೂ.ಗಳನ್ನು "ಧರಿತ್ರಿ"ಗೆ ಸಂತೋಷದಿಂದ ನೀಡಿದ್ದಾರೆ.

ನರೇಂದ್ರ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ರಾಜಣ್ಣನವರು ಉಪಸ್ಥಿತರಿದ್ದರು.

ಟ್ರಸ್ಟಿನ ಕಾರ್ಯದರ್ಶಿಗಳಾದ ಶ್ರೀಕಾಂತ ಬೆಟಗೇರಿಯವರು ಈ ಕೆಳಕಂಡ ಧ್ಯೇಯೋದ್ದೇಶಗಳ ಬಗ್ಗೆ ವಿವರವಾಗಿ ತಿಳಿಸಿದರು.

1) ಸುತ್ತಲಿರುವ ಹಳ್ಳಿಗಳ ನ್ಯೂನ್ಯತೆ ಇರುವ ಮಕ್ಕಳಿಗಾಗಿ ಶಾಲೆ.
2) ಬಹುವಿಧ ನ್ಯೂನ್ಯತೆಯುಳ್ಳ ವ್ಯಕ್ತಿಗಳ ವಸತಿ ನಿಲಯ.
3) ವಿಶೇಷ ಶಿಕ್ಷಣದಲ್ಲಿ ಶಿಕ್ಷಕರ ತರಬೇತಿ ಕೇಂದ್ರ.

ಈಗಾಗಲೇ ಎರಡು ವರ್ಷಗಳಿಂದ ಶಾಲೆ ನಡೆಯುತ್ತಿದ್ದು ಪ್ರಸ್ತುತ ಒಂಬತ್ತು ಹಳ್ಳಿಗಳಿಂದ 23 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.

ವರದಿ : ಶ್ರೀಕಾಂತ ಬೆಟಗೇರಿ




ಎಡದಿಂದ ಬಲಕ್ಕೆ : ಶ್ರೀ ರವಿ, ಶ್ರೀ ವಿ.ಎಸ್. ಹೆಗಡೆ, ಶ್ರೀಧರಸಾಗರ, ಶ್ರೀ ಮಾನಂದಿ ಸುರೇಶ್, ಶ್ರೀ ಗೋವಿಂದರಾಜು

## ನೆಲೆ–ಬಳಗದವರಿಗೆ ಕಾರ್ಯಾಗಾರ

ನೆಲೆಗೆ ಸಹಕಾರ ನೀಡಲು ಬರುವವರು ಬಹಳ ಮಂದಿ. ಹೀಗೆ ಬರುವವರು ಸಂಗೀತ, ಭಜನೆ, ಮನೆಪಾಠ ಇತ್ಯಾದಿಗಳನ್ನು ಮಕ್ಕಳಿಗೆ ವರ್ಷ ಪೂರ್ತಿ ವ್ಯವಸ್ಥಿತವಾಗಿ ಬಂದು ಹೇಳಿಕೊಡುತ್ತಾರೆ. ಸೇವಾ ಮನೋಭಾವವುಳ್ಳ ವ್ಯಕ್ತಿಗಳನ್ನು ಒಟ್ಟು ಸೇರಿಸಿ ಒಂದೊಂದು ನೆಲೆಗೂ ಪ್ರತ್ಯೇಕ 'ನೆಲೆ–ಬಳಗ' ರಚಿಸಲಾಗಿದೆ. ಎಲ್ಲ ನೆಲೆ ಬಳಗದವರಿಗೆ ಕಾರ್ಯಾಗಾರವನ್ನು ದಿನಾಂಕ 05.07.09ರ ಭಾನುವಾರದಂದು ಆಯೋಜಿಸಲಾಗಿತ್ತು.

ನೆಲೆ–ಬಳಗ ಮತ್ತು ನೆಲೆ ಪ್ರಕಲ್ಪ ದಲ್ಲಿ ತೊಡಗಿರುವ ಪೂರ್ಣಾವಧಿ ಕಾರ್ಯಕರ್ತರೂ ಸೇರಿದಂತೆ ಸುಮಾರು 60 ಮಂದಿ ಭಾಗವಹಿಸಿದ್ದರು. ಸಂಚಾಲಕರಾದ ಶ್ರೀ ಕೃಷ್ಣಮೂರ್ತಿ, ಪ್ರತಿಷ್ಠಾನದ ವಿಶ್ವಸ್ತರಾದ ಶ್ರೀ ಡಿ. ಎಂ. ಕಿರಣ್, ಶ್ರೀ ವೆಂಕಟೇಶಮೂರ್ತಿ, ಜ್ಞಾನ ಆಯೋಗದ ಕಾರ್ಯದರ್ಶಿ ಗಳಾದ ಶ್ರೀ ಎಂ. ಕೆ. ಶ್ರೀಧರರವರು ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಎಲ್ಲರೂ ತಮ್ಮ ಅನಿಸಿಕೆಗಳನ್ನು ಉತ್ಸಾಹದಿಂದ ಹಂಚಿಕೊಂಡರು. ಸಮಾಜಕಾರ್ಯದಲ್ಲಿ ತೊಡಗಿಸಿಕೊಳ್ಳುವವರಿಗೆ ಕಾರ್ಯಾಗಾರ ನಡೆಸುವುದು ಉತ್ತಮ, ಇನ್ನೂ ಹೆಚ್ಚು ಸಮಯ ಇದ್ದರೆ ಒಳ್ಳೆಯದು ಎಂಬ ಅಭಿಪ್ರಾಯ ಬಂದಿದೆ.

## ಮಕ್ಕಳಿಗೂ ಬೇಕು ಆಪ್ತಸಲಹೆ

ಕಳೆದ ಆರು ವರ್ಷಗಳಿಂದ ಮಕ್ಕಳ ಮಾರ್ಗದರ್ಶಿ ಕೇಂದ್ರವು ಪ್ರತಿಷ್ಠಾನದ ಕಾರ್ಯಾಲಯವಾದ ಅಜಿತಶ್ರೀಯಲ್ಲಿ ನಡೆಯುತ್ತಿದೆ. ಮಕ್ಕಳಲ್ಲಿ ವಿಪರೀತ ಚಟುವಟಿಕೆ, ಮೌನವಾಗಿರುವುದು, ನಿಧಾನ ಕಲಿಕೆ, ಸಂಕೋಚ ಇತ್ಯಾದಿ ಅನೇಕ ಸಮಸ್ಯೆಗಳು ಇರುತ್ತವೆ. ಆಪ್ತಸಲಹೆಯ ಮೂಲಕ ಮಗುವಿನ ಸಮಸ್ಯೆಯನ್ನು ಹೊರತೆಗೆಯುವಲ್ಲಿ ಆಪ್ತಸಲಹಾಗಾರರು ಯಶಸ್ವಿಯಾಗುತ್ತಾರೆ. ಮಗುವಿಗೆ ಚಟುವಟಿಕೆ ನೀಡಿ ಸಮಸ್ಯೆಯನ್ನು ಬಗೆಹರಿಸಿ ಸಹಜ ಸ್ಥಿತಿಗೆ ತರುತ್ತಾರೆ.

ಮಕ್ಕಳ ಆಪ್ತಸಲಹೆಯಲ್ಲಿ ಆಸಕ್ತಿ ಇರುವ ಗೃಹಣಿಯರಿಗೆ, ಶಿಕ್ಷಕಿಯರಿಗೆ ಪ್ರತಿ ವರ್ಷ ತರಬೇತಿ ನೀಡಲಾಗುತ್ತಿದೆ. ಈ ವರ್ಷದ ತರಬೇತಿಯ ಕಾರ್ಯಕ್ರಮದ ಉದ್ಘಾಟನೆ ಇತ್ತೀಚೆಗೆ ನಡೆತು. ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಶ್ರೀಧರ ಸಾಗರರವರು ದೀಪ ಬೆಳಗಿಸಿ ಉದ್ಘಾಟಿಸಿದರೆ, ಡಾ|| ಮಾಳಕಾ ಕಪೂರ್ ಅವರು ಪ್ರಾರಂಭದ ಮಾಹಿತಿಯನ್ನು ನೀಡಿದರು.

ಈ ವರ್ಷದ ತರಬೇತಿಯಲ್ಲಿ 60 ಮಹಿಳೆಯರು ಪಾಲ್ಗೊಂಡಿದ್ದಾರೆ. ಈ ತರಬೇತಿ ಪ್ರತಿ ಶನಿವಾರ ಇರುತ್ತದೆ. ಆರು ವಾರಗಳ ಕಾಲ ಇಲ್ಲಿನ ತರಬೇತಿಯನ್ನು ಪಡೆದುಕೊಂಡರೆ ನಾವೂ–ನೀವೂ ಕೂಡಾ ಮಕ್ಕಳ ಆಪ್ತಸಲಹೆಗಾರರಾಗಬಹುದು.

## ನೀವು ಬರೆದಂತೆ.............

ಸೇವಾದಿಶಾ ಪತ್ರಿಕೆ ತುಂಬಾ ಚೆನ್ನಾಗಿ ಬರುತ್ತಿದೆ. ಅದರಲ್ಲಿರುವ ಒಳ್ಳೆಯ ವಿಷಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಿರ್ದೇಶಕರ ನುಡಿಯಲ್ಲಿ ಯಾವುದಾದರೂ ಒಂದು ವಿಷಯ ಹೊಸದಾಗಿರುತ್ತದೆ. ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಪ್ರತಿಕೆ ಮೂಲಕ ತಿಳಿಸಲಾಗುತ್ತದೆ. ಯಾವುದೇ ಒಂದು ಕಾರ್ಯಕ್ರಮ ಆದರೂ ಅದನ್ನು ಪತ್ರಿಕೆಯಲ್ಲಿ ಹಾಕಿಸಿ ಅದರಿಂದ ಆದ ಪ್ರಯೋಜನವನ್ನು ತಿಳಿಯಪಡಿಸುತ್ತಿದೆ ಪತ್ರಿಕೆ. ಎಷ್ಟೋ ಜನಕ್ಕೆ ಸೇವಾಕಾರ್ಯಗಳ ಮಾಹಿತಿ ಇರುವುದಿಲ್ಲ, ಅಂತಹವರಿಗೆ ಸೇವಾಕಾರ್ಯಗಳ ಪರಿಚಯ ಮಾಡಿಕೊಡಲು ಸೇವಾದಿಶಾ ಬಹಳ ಉಪಯುಕ್ತ. ಸೇವೆ ಬಹಳಷ್ಟು ಜನ ಮಾಡುತ್ತಾರೆ. ಆದರೆ, ನಿಸ್ವಾರ್ಥ ಭಾವನೆಯಿಂದ ಸೇವೆ ಮಾಡುವವರ ಬಗ್ಗೆ ಸೇವಾದಿಶಾ ಪರಿಚಯ ಮಾಡಿಕೊಡುತ್ತದೆ.

– ಚಿ|| ಕುಮಾರ, ನೆಲೆ ನಮ್ಮ ಮನೆ, ಬೆಂಗಳೂರು

ಸೇವಾ ದಿಶಾ ಪತ್ರಿಕೆ ಬಂದೊಡನೆ ಮೊದಲು ಕಣ್ಣುಗಳು ಓಡುವುದು ನಿರ್ದೇಶಕರ ನುಡಿಯ ಕಡೆ. ಏಕೆಂದರೆ ಪ್ರತಿ ತಿಂಗಳೂ ಏನಾದರೊಂದು ಹೊಸ ವಿಷಯವಿರುತ್ತದೆ. ಜೀವಂತ ಉದಾಹರಣೆಗಳಿರುತ್ತವೆ. ಈ ಲೇಖನ ಮನಸ್ಸಿಗೆ ತುಂಬಾ ಹತ್ತಿರ ಅನಿಸುತ್ತದೆ. ನಿಜಕ್ಕೂ ಸೇವೆಗೆ ಒಂದು ದಿಶೆಯನ್ನು ಕೊಡುವ ಲೇಖನ ಇದು.

ಸೇವಾದಿಶಾವನ್ನು ಓದಿದಾಗ ಎಂಥವರಿಗೂ ಪ್ರತಿಷ್ಠಾನ ಹಾಗೂ ಚಟುವಟಿಕೆಯ ಪೂರ್ಣ ಚಿತ್ರಣ ಸಿಗುತ್ತದೆ. ಮಹಾಪುರಷರ ಜೀವನ ಘಟನೆಗಳು ಹಾಗೂ ಹಲವು ವಿಚಾರಗಳು ಸೇವಾನಿರತರಿಗೆ ಪ್ರೇರಣಾ ಶಕ್ತಿಯಾಗಿವೆ. ಜೂನ್ ತಿಂಗಳಲ್ಲಿ ಪ್ರಕಟವಾದ ನೆಲೆಮಕ್ಕಳ ಬೇಸಿಗೆ ರಜೆಯ ಅನುಭವಗಳು ಹೃದಯಸ್ಪರ್ಶಿಯಾಗಿದೆ. ಮಕ್ಕಳ ಮನದ ಸಂತೋಷಕ್ಕೆ ಪಾರವೇ ಇಲ್ಲ ಅನಿಸುತ್ತದೆ. ಅದರಲ್ಲೂ ಕು|| ಸೌಮ್ಯ (ನೆಲೆ ಪ್ರೇಮಾಂಜಲಿ) ತನ್ನ ಅನುಭವದ ಕೊನೆಯಲ್ಲಿ – ಬೆಂಗಳೂರಿಗೆ ಮರಳಿಬರುವಾಗ, ಟ್ರೈನ್‌ನಲ್ಲಿ ನೋಡಲು ಗಲೀಜಾಗಿರುವ, ಕೈಯಲ್ಲಿ ಮಗುವನ್ನು ಹೊಂದಿದ, ಎಲ್ಲರಿಂದ ತಿರಸ್ಕತಳಾಗಿರವ ಒಬ್ಬ ಮಹಿಳೆಗೆ ತನ್ನ ಜಾಗವನ್ನು ಬಿಟ್ಟುಕೊಟ್ಟು, ಅಲ್ಲದೆ ತನ್ನಲ್ಲಿರುವ ಹಣವನ್ನೂ ಅಕ್ಕನಿಗೆ ಊಟಮಾಡಿಕೊಳ್ಳಲಿಕ್ಕೆ ಕೊಟ್ಟೆ ಅಂತ ಬರೆದಿದ್ದಾಳೆ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ 'ಅಬ್ಬಾ! ಅದೆಂಥ ಸೇವಾ ಮನೋಭಾವ!' ಅನಿಸುತ್ತದೆ. ಅವಳ ಈ ರೀತಿಯ ಗುಣ ನೆಲೆಯಲ್ಲಿ ಅವಳಿಗೆ ಸಿಕ್ಕ ವಾತಾವರಣ, ಸಂಸ್ಕಾರವನ್ನು ಪ್ರತಿಬಿಂಬಿಸುತ್ತದೆ. ಈ ವರ್ಷದ ಬೇಸಿಗೆ ರಜೆಯಲ್ಲಿ ನೆಲೆ ಮಕ್ಕಳ ಸಹವಾಸದಿಂದ ಮನೆಯಲ್ಲಿಯೇ ಅಪ್ಪ –ಅಮ್ಮರೊಂದಿಗೆ ಬೆಳೆಯುತ್ತಿರುವ ಅದೆಷ್ಟೋ ಮಕ್ಕಳ ಮನಕ್ಕೆ ಈ ಸಂಸ್ಕಾರದ ಕಂಪು ಹರಡಿದೆ. ಈ ವರ್ಷದ ಪ್ರತಿಷ್ಠಾನದ ಈ ಯೋಜನೆಯ ಯಶಸ್ಸಿಗೆ ಸಹಕರಿಸಿದ ಎಲ್ಲ ಬಂಧುಗಳಿಗೂ ಧನ್ಯವಾದಗಳು.

– ಭ| ಚೇತನಾ.ಟಿ, ಯೋಗಶ್ರೀ, ಬೆಂಗಳೂರು

## ಶಿಶು ಶಿಕ್ಷಣ ಶಿಬಿರದ ಅನಿಸಿಕೆ

★ ಹಿಂದು ಸೇವಾ ಪ್ರತಿಷ್ಠಾನದವರು ಹಳ್ಳಿಗಳಲ್ಲಿ ಸಮಗ್ರ ಶಿಶುಶಿಕ್ಷಣ ರೂಪಿಸುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ.

–ಶ್ರೀಮತಿ ಸುನಂದಾ ನಾಗಾನಂದ, ಮಾಂಟೆಸ್ಸೊರಿ ಶಿಕ್ಷಣ ತಜ್ಞೆ

★ ನಾವು ರಾಜಕೀಯವಾಗಿ ಬ್ರಿಟಿಷರಿಂದ ಮುಕ್ತಿ ಪಡೆದರೂ ಸಾಂಸ್ಕತಿಕವಾಗಿ ಪಡೆದಿಲ್ಲ, ಇಂಗ್ಲೀಷ್ ವ್ಯಾಮೋಹದಿಂದ ನಮ್ಮ ಸಾಂಸ್ಕೃತಿಕ ಪರಂಪರೆ ನಾಶವಾಗುತ್ತಿದೆ ಎಂಬ ಹತಾಶಭಾವ ಉಂಟಾಗಿತ್ತು. ಶಿಶು ಶಿಕ್ಷಣ ಶಿಬಿರಕ್ಕೆ ಬಂದು ಶಿಬಿರಾರ್ಥಿಗಳ ಅನುಭವ ಕೇಳಿದಾಗ ನೀವು ಕೊಡುತ್ತಿರುವ ಶಿಕ್ಷಣದಿಂದ ಪಾರಂಪರಿಕ ಮೌಲ್ಯ ಉಳಿದು ಕೊಂಡಿದೆ ಎಂದು ಹರ್ಷಗೊಂಡಿರುವೆ.

– ಶ್ರೀಮತಿ ಡಾ||ಜ್ಯೋತ್ಸ್ನಾ ಕಾಮತ್, ಆಕಾಶವಾಣಿಯ ನಿವೃತ್ತ ನಿರ್ದೇಶಕಿ

## ನಿರ್ದೇಶಕರ ನುಡಿ

### ಆಶ್ರಯದ ರುವಾರಿ ಶಾರದಕ್ಕ

ಈಗಾಗಲೇ ಐದು ಗಂಡು ಹುಟ್ಟಿದೆ. ಇನ್ನು ಒಂದಾದರೂ ಹೆಣ್ಣು ಸಿಗಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದೆ. ದೇವರು ನನ್ನ ಕರೆಗೆ ಓಗೊಟ್ಟು ಮೊನ್ನೆ ಶನಿವಾರ ಅವಳಿಂದ ಒಂದು ಹೆಣ್ಣನ್ನು ಅನುಗ್ರಹಿಸಿದ ಎಂದು ಸಂತೋಷದಿಂದ ಹಿಗ್ಗಿನಿಂದ ಬೀಗುತ್ತಿದ್ದ ನನಗೆ ಆ ಆನಂದ ಕ್ಷಣಿಕವಾಗಿತ್ತು. ಕಾರಣ ಆ ಹೆಣ್ಣಿಗೆ ಜನ್ಮ ನೀಡಿದವಳು ಕೆಲವೇ ಸಮಯದಲ್ಲಿ ಶಿವನ ಪಾದ ಸೇರಿದಳು. ಆ ಹೆಣ್ಣಿಗೆ ತಾಯಿಯಾಗಿ ಈಗ ಹಾಲುಣಿಸುತ್ತಿರುವವಳು ಇನ್ನೊಬ್ಬಳಿದ್ದಾಳೆ. ಅದು ಸ್ವಲ್ಪ ನೆಮ್ಮದಿ ನೀಡಿತು. ಆದರೂ ದುಃಖವನ್ನು ಸಹಿಸಲು ಸಾಧ್ಯವಾಗುತ್ತಿಲ್ಲ-ಎಂದು ಶಾರದಕ್ಕ ಕಣ್ಣೀರಿಡುತ್ತ ಹೇಳಿದರು. ನಮ್ಮ ಜೊತೆಗಿದ್ದ ಕಾರಿನ ಸಾರಥಿ ನಾರಾಯಣ ದುಃಖಪಡಬೇಡಿ ಅವಳ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಪರಮಾತ್ಮನಲ್ಲಿ ಬೇಡಿಕೊಳ್ಳಿ ಎಂದು ಸಂತೈಸಿದ. ತನ್ನ ಆಶ್ರಮದಲ್ಲಿರುವ ಹಸುವಿನ ಬಗ್ಗೆ ಅಂತಹ ಪ್ರೀತಿ. ತನ್ನ ಮಗಳೆಂದೇ ತಿಳಿದು ಅದರ ಕರುಗಳನ್ನು ತನ್ನ ಮೊಮ್ಮಕ್ಕಳೆಂದು ಭಾವಿಸಿರುವ ಶಾರದಕ್ಕನ ಅಂತರಾಳದ ಭಾವನೆ ಇದು.

ಈ ಶಾರದಕ್ಕ ಒಬ್ಬ ನಿವೃತ್ತ ಶಿಕ್ಷಕಿ. ತನ್ನ ಸಂಬಳದಲ್ಲಿ ಉಳಿಸಿದ್ದನ್ನು ಹಾಗೂ ಬರುತ್ತಿರುವ ಪಿಂಚಣಿ ಹಣವನ್ನು ಸ್ವತಃ ತಾನೇ ಪ್ರಾರಂಭ ಮಾಡಿದ ಆಶ್ರಯ(ವೃದ್ಧಾಶ್ರಮ)ಕ್ಕೆ ಧಾರೆಯೆರೆದು ಅದರಲ್ಲಿ ತಾವು ಒಬ್ಬರಾಗಿರುವ ಸುಮಾರು ಎಪ್ಪತ್ನಾಲ್ಕು ವರ್ಷದ ಯುವತಿ!

ಕೇರಳದ ಕಾಸರಗೋಡು ತಾಲ್ಲೂಕಿನ ನೀರ್ಚಾಲು ಹತ್ತಿರದ ಕನ್ನೆಪಾಯಲ್ಲಿ ಸುತ್ತಲು ಮುಸಲ್ಮಾನರೇ ಇರುವ ಕಡೆ ಐದೂವರೆ ಎಕ್ರೆ ಜಾಗ ಖರೀದಿಸಿ 1990ರಲ್ಲಿ ಜನಸೇವಾ ವಿಶ್ವಸ್ಥ ನಿಧಿ ಹೆಸರಲ್ಲಿ ಟ್ರಸ್ಟ್ ರಿಜಿಸ್ಟರ್ ಮಾಡಿಸಿದ್ದಾರೆ.

ತಾನೇ ನೆಟ್ಟು ಬೆಳೆಸಿದ ತೆಂಗು, ಮಾವು ಫಲಕೊಡುವುದನ್ನು ಕಾಣುವುದಕ್ಕೂ ಅದೃಷ್ಟ ಬೇಕಲ್ಲವೇ? ಅದು ಇವರ ಪಾಲಿಗೆ ಒದಗಿ ಬಂದಿದೆ. ಇನ್ನು ಅನೇಕ ವಿಧದ ತರಕಾರಿ, ಹಣ್ಣು ಹಂಪಲು ಗಿಡಮರ ಬಳ್ಳಿಗಳಿಗೆ ಕೊರತೆಯಿಲ್ಲ, ತುಳಸಿ ಗಿಡಗಳು ಸಮೃದ್ಧವಾಗಿದೆ. ದಿನಕ್ಕೆ ಸುಮಾರು ನೂರೈವತ್ತು ರೂಪಾಯಿ ಉತ್ಪನ್ನ ತರುವ ಮಲ್ಲಿಗೆ ಗಿಡಗಳು ಇವೆ. ನೀರು ಪೋಲಾಗದಂತೆ ಬಳಸಿದ ನೀರನ್ನು ತೋಟಕ್ಕೆ, ಮಳೆ ನೀರನ್ನು ಸಂಗ್ರಹಿಸಿ ಆಶ್ರಮಕ್ಕೆ ಬಳಸುತ್ತಿರುವುದು ಅನುಕರಣೀಯ. ಅಲ್ಲಿರುವ ವೃದ್ಧರು ಆಶ್ರಮ ಎಂದುಕೊಳ್ಳದೆ ಮನೆಯೆಂದೇ ತಿಳಿದು ಆನಂದದಿಂದ ಇದ್ದಾರೆ. ಸಂಘದ ಹಿರಿಯ ಸ್ವಯಂಸೇವಕ ರಾದ ಸುಂದರರಾವ್ ಕೂಡ ಆಶ್ರಮವಾಸಿಗಳಾಗಿ ಕಾರ್ಯಾಲಯ, ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದಾರೆ. ಅವರೊಬ್ಬ ಶಿಸ್ತಿನ ಸಿಪಾಯಿ. ಮುಕ್ತಕ್ಕ ಶಾರದಕ್ಕರಿಗೆ ಬಲಗೈಯಂತೆ ಇದ್ದಾರೆ. ಶಾರದಕ್ಕ ಒಬ್ಬ ತಾಯಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅವರು ಆರೋಗ್ಯದಿಂದ ಶತಾಯು ಆಗಲಿ ಎಂದು ಹಾರೈಸೋಣ.

- ಶ್ರೀಧರ ಸಾಗರ್

ದೇಶದಲ್ಲಿ ಒಟ್ಟು 1,61,729 ವನವಾಸಿ ಹಾಡಿಗಳಿದ್ದು ಆ ಪೈಕಿ 47,797 ಹಾಡಿಗಳಲ್ಲಿ ವನವಾಸಿ ಕಲ್ಯಾಣದ ಸೇವಾ ಕಾರ್ಯ ನಡೆಯುತ್ತಿದೆ.

## ಸಂತ ವಚನ

ಭಾರತದಲ್ಲಿ ಎಷ್ಟು ರೂಪಾಯಿಗಳನ್ನು ಹೊಂದಿದ ಶ್ರೀಮಂತನಾದರೂ, ಅಮೇರಿಕಕ್ಕೆ ಹೋಗಬೇಕಾದರೆ ಅದನ್ನು ಡಾಲರಿಗೆ ಪರಿವರ್ತಿಸಿ ಕೊಂಡಿರಲೇಬೇಕು. ಭಾರತದ ರೂಪಾಯಿ ಅಲ್ಲಿ ಚಲಾವಣೆಗೆ ಬರುವುದಿಲ್ಲ! ಹಾಗೆಯೇ, ಇಹಲೋಕದಲ್ಲಿ ಎಷ್ಟು ಆಸ್ತಿ ಪಾಸ್ತಿ ಇದ್ದರೂ ಪರಲೋಕಕ್ಕೆ ಹೋಗುವಾಗ ಅವು ಚಲಾವಣೆಗೆ ಬರುವುದಿಲ್ಲ, ಅಲ್ಲಿನ ಅನುಕೂಲತೆಗಾಗಿ ಅವನ್ನು ಪುಣ್ಯರೂಪದಲ್ಲಿ ಪರಿವರ್ತಿಸಿಕೊಂಡು ಹೋಗಬೇಕು. ಅದಕ್ಕಾಗಿ ಸಮಾಜಕ್ಕೆ ಉಪಯೋಗವಾಗುವಂತಹ ಒಳ್ಳೆಯ ಕೆಲಸಗಳನ್ನು ಮಾಡಬೇಕು.

## ಸೇವಾವ್ರತಿ ಅಭಿಯಾನ

ಸಾಮಾಜಿಕ ಜಾಗೃತಿಗಾಗಿ ಅಗತ್ಯ ಬಿದ್ದಾಗ ಪ್ರತಿಷ್ಠಾನ ಅಭಿಯಾನಗಳನ್ನು ಕೈಗೆತ್ತಿಕೊಂಡಿದೆ. ಈ ಎಲ್ಲ ಅಭಿಯಾನಗಳಲ್ಲಿ ಸೇವಾವ್ರತಿಗಳು ಮತ್ತು ಸ್ಥಾನೀಯರು ಸಕ್ರಿಯವಾಗಿ ಪಾಲ್ಗೊಂಡು ಯಶಸ್ವಿಗೊಳಿಸಿದ್ದಾರೆ. ಈ ವಿಶಾಲವಾದ ಹಿಂದೂ ಸಮಾಜದ ಸೇವಾ ಕಾರ್ಯಗಳಲ್ಲಿ ತೊಡಗಲು ಹೆಚ್ಚು ಹೆಚ್ಚು ಮಾನವ ಸಂಪನ್ಮೂಲದ ಅಗತ್ಯವೂ ಇದೆ.

ಬರುವ ಆಗಸ್ಟ್ 15 ರಿಂದ 30ರವರೆಗೆ ಪ್ರತಿಷ್ಠಾನವು ಕರ್ನಾಟಕದ ರಾಜ್ಯಾದ್ಯಂತ ಸೇವಾವ್ರತಿ ಅಭಿಯಾನ ಕೈಗೆತ್ತಿಗೊಂಡಿದೆ. ಸೇವಾವ್ರತಿಗಳಾಗಿ ಹೊರಡುವವರಿಗೆ ಇದೊಂದು ಸುವರ್ಣಾವಕಾಶವಾಗಿದೆ. ಒಂದು ಊರಿನಿಂದ 10 ಅಥವಾ ಅದಕ್ಕಿಂತ ಹೆಚ್ಚು ಜನರು ಸೇವಾವ್ರತಿಗಳಾಗಿ ಹೊರಡಲು ಸಿದ್ಧವಿದ್ದಲ್ಲಿ ಅದೇ ಊರಿನಲ್ಲಿ ಸಂದರ್ಶನದ ವ್ಯವಸ್ಥೆ ಮಾಡಲಾಗುತ್ತದೆ. ಸಮಾಜ ಸೇವೆಗೆ ಇರುವ ಈ ಅವಕಾಶವನ್ನು ಬಳಸಿಕೊಂಡು ವ್ಯಾಪಕವಾಗಿ ಯುವಜನತೆಯನ್ನು ಸಂಪರ್ಕಿಸಿ, ಹೆಚ್ಚು ಜನರು ಸೇವಾವ್ರತಿಗಳಾಗಿ ಹೊರಡುವಂತೆ ಮಾಡಿ, ಈ ಅಭಿಯಾನವನ್ನು ಯಶಸ್ವಿಗೊಳಿಸುವಿರೆಂದು ಆಶಿಸುವೆ.

-ಶ್ರೀಧರ ಸಾಗರ್

ದಿನಾಂಕ 1-10-2009ರಿಂದ 10-11-2009ರವರೆಗೆ ಮಹಿಳಾ ಸೇವಾವ್ರತಿ ಶಿಬಿರವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ವಿವರಗಳಿಗೆ ಸಂಪರ್ಕಿಸಿ : ಶ್ರೀಪಾದ – 94803 16629, 080–2660 8926

## ಕೃತಜ್ಞತೆ

ಶ್ರೀಯುತ ಕೆ.ಆರ್.ಶಿವಸ್ವಾಮಿಯವರು ಕಳೆದ ಎರಡು ವರ್ಷಗಳಿಂದ ಸೇವಾದಿಶಾವನ್ನು ಸಮಯಕ್ಕೆ ಸರಿಯಾಗಿ ಸಂಪಾದನೆಗೊಳಿಸಿ ಓದುಗರ ಕೈಗೆ ತಲುಪಿಸುತ್ತಿದ್ದರು. ಇತ್ತೀಚೆಗೆ ಅವರ ಕಾರ್ಯಬಾಹುಳ್ಯದಿಂದಾಗಿ ಸಂಪಾದಕರ ಜವಾಬ್ದಾರಿಯನ್ನು ನಿರ್ವಹಿಸುವುದು ಕಷ್ಟವೆಂದು ತಿಳಿಸಿದ್ದಾರೆ. ಹಾಗಾಗಿ, ಇನ್ನು ಮುಂದೆ ಶ್ರೀಯುತ ರಾಧಾಕೃಷ್ಣ ಹೊಳ್ಳರವರು ಈ ಕಾರ್ಯವನ್ನು ನಿರ್ವಹಿಸಲಿದ್ದಾರೆ. ಶ್ರೀಯುತ ಶಿವಸ್ವಾಮಿಯವರ ಕಾರ್ಯವನ್ನು ಪ್ರತಿಷ್ಠಾನವು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ.

## ಸೇವೆಯೆಂಬ ಯಜ್ಞದಲ್ಲಿ......

# ಕನ್ಯಾಕುಮಾರಿಯಲ್ಲಿ ಹೀಗೊಂದು ಸಾಧನೆ

ಕನ್ಯಾಕುಮಾರಿ ಜಿಲ್ಲೆಯಲ್ಲಿ ಕಡಪ್ಪರೈ ಎಂಬುದು ಒಂದು ಸಣ್ಣ ವನವಾಸಿ ಹಳ್ಳಿ. ಈ ಹಳ್ಳಿಗೆ ಹೋಗಬೇಕಾದರೆ ಗುಡ್ಡಗಳನ್ನು ಹತ್ತಿ ಇಳಿಯುತ್ತಾ ಕಾಲ್ನಡಿಗೆಯಲ್ಲಿಯೇ ಹೋಗಬೇಕು. ಯಾವುದೇ ರಸ್ತೆ ಇಲ್ಲ. ಇಲ್ಲಿನ ವನವಾಸಿಗಳಿಗೆ ಜೀವನ ನಿರ್ವಹಣೆಯೇ ಒಂದು ದೊಡ್ಡ ಸವಾಲು. ಕೂಲಿ ಕೆಲಸಕ್ಕೆ ಹೋದರೂ ಸಂಬಳ ಕಡಿಮೆ. ಯಾವುದೋ ಖಾಯಿಲೆಯಾದರೆ, ಮಕ್ಕಳ ಮದುವೆ ಮಾಡಬೇಕಾದರೆ ಲೇವಾದೇವಿಗಾರರಿಂದ ಹಣ ತರುವುದೊಂದೇ ಮಾರ್ಗ. ಎಷ್ಟೋ ಕುಟುಂಬಗಳು ಹೀಗೆ ತಂದ ಹಣಕ್ಕೆ ಪ್ರತಿಯಾಗಿ ಜೀವನವಿಡೀ ಸಾಲಗಾರರ ಮನೆಯಲ್ಲಿ ಜೀತಮಾಡಿದ್ದೂ ಇದೆ! ಹೀಗೆ ಈ ಬಡ ಕುಟುಂಬಗಳ ಮುಗ್ಧತೆಯನ್ನು ದುರುಪಯೋಗಪಡಿಸಿ ಕೊಂಡ ಸಾಲಗಾರರೇ ಹೆಚ್ಚು.

> ಸ್ವಸಹಾಯ ಸಂಘಗಳೆಂದರೆ ಮನೆಯಲ್ಲಿ ಕೆಲಸವಿಲ್ಲದ ಹೆಂಗಸರು ಒಟ್ಟುಸೇರಿ ಹರಟೆ ಹೊಡೆಯುವ ತಾಣವಲ್ಲ ಎನ್ನುವುದನ್ನು ಸೇವಾಭಾರತಿಯ ಸ್ವಸಹಾಯ ಸಂಘಗಳು ತೋರಿಸಿವೆ. ಸ್ವಸಹಾಯ ಸಂಘಗಳ ಮೂಲಕ ಇಂತಹ ಕೆಲಸವನ್ನೂ ಮಾಡಬಹುದೇ ಎಂದು ಕೇಳುವ ಹಾಗೆ ಇವು ಕೆಲಸ ಮಾಡುತ್ತಿವೆ.

ಆ ಊರಿನಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಮಹಿಳಾ ಸ್ವಸಹಾಯ ಸಂಘ ಶುರುವಾಯಿತು. ಸೀತಾಯಿ ಎಂಬ ಮಹಿಳೆಯೂ ಅದರ ಸದಸ್ಯೆ. ಆಕೆಯ ಮನೆಯವರಿಗೆ ಸ್ವಲ್ಪ ಜಮೀನಿತ್ತು. ಆದರೆ, ಇಪ್ಪತ್ತು ವರ್ಷಗಳ ಹಿಂದೆ, ಆಕೆಯ ತಂದೆ ತೆಗೆದುಕೊಂಡ 10,000 ರೂಪಾಯಿಗಳ ಸಾಲಕ್ಕೆ ಪ್ರತಿಯಾಗಿ ಜಮೀನ್ದಾರನೊಬ್ಬ ಜಮೀನನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದ. ಆತನೇ ಬೆಳೆಯನ್ನು ಬೆಳೆಯುತ್ತಿದ್ದ. ಹಾಗಾಗಿ ಜೀವನೋಪಾಯಕ್ಕೆ ಕೂಲಿಯೊಂದೇ ಇವರಿಗಿದ್ದ ಮಾರ್ಗವಾಗಿತ್ತು. ಸೀತಾಯಿ ಸ್ವಸಹಾಯ ಸಂಘ ಸೇರಿದ ಮೇಲೆ ತಮ್ಮ ಜಮೀನನ್ನು ಆ ಸಾಲಗಾರನ ಕೈಯಿಂದ ಬಿಡಿಸಿಕೊಳ್ಳಬೇಕೆಂದು ನಿರ್ಧಾರ ಮಾಡಿದಳು. ಆ ವೇಳೆಗೆ ಸಂಘಕ್ಕೆ ಬ್ಯಾಂಕಿನಿಂದ 60,000 ರೂಪಾಯಿಗಳ ಸಾಲವೂ ದೊರೆಯಿತು. ನೇರವಾಗಿ ಆತನ ಬಳಿಗೆ ಹೋಗಿ 20 ವರ್ಷಗಳ ಹಿಂದೆ ತೆಗೆದುಕೊಂಡ ಸಾಲ, ಬಡ್ಡಿ ಸಮೇತ ಈಗ ಎಷ್ಟಾಗಿದೆಯೆಂದು ವಿಚಾರಿಸಿದಳು. ಅದು 60,000 ರೂಪಾಯಿಯಾಗಿತ್ತು. ಸಂಘದಲ್ಲಿ ಈ ವಿಚಾರ ಚರ್ಚಿಸಿದ ಅನಂತರ, ಆ ಸಾಲವನ್ನು ತೀರಿಸಿ ಜಮೀನನ್ನು ಬಿಡಿಸಿಕೊಳ್ಳಬೇಕೆಂದು ತೀರ್ಮಾನಿಸ ಲಾಯಿತು. ಹೀಗೆ ಅವರ ಜಮೀನು ಮತ್ತೆ ಅವರ ವಶಕ್ಕೆ ಬಂತು. ಇದರಿಂದ ಅವರು ಬೆಳೆ ಬೆಳೆದು ಸ್ವಲ್ಪ ಉಳಿತಾಯ ಮಾಡಿ ಸಂಘದ ಸಾಲದ ಕಂತು ತೀರಿಸಲೂ ಸಾಧ್ಯವಾಗುತ್ತಿದೆ.

ಅಂಚುಕಂದರೈ ಕನ್ಯಾಕುಮಾರಿ ಜಿಲ್ಲೆಯ ಇನ್ನೊಂದು ಹಳ್ಳಿ. ರಾಜು ಎಂಬ ರೈತನಿಗೆ ಹೃದಯ ಶಸ್ತ್ರ ಚಿಕಿತ್ಸೆ ಆಗಬೇಕಾಗಿತ್ತು. ತಿರುವನಂತಪುರ ದಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವುದೆಂದೂ ತೀರ್ಮಾನವಾಗಿತ್ತು. ಆದರೆ, ಹಣದ್ದೇ ಕೊರತೆ ಅವರಿಗೆ. ಏನು ಮಾಡಬೇಕೆಂಬುದೇ ತೋಚದ ಸ್ಥಿತಿ ಮನೆಯವರಿಗೆ. ಈ ಸಮಯದಲ್ಲಿ ಅಲ್ಲಿನ ಎಲ್ಲಾ ಹತ್ತು ಸ್ವಸಹಾಯ ಸಂಘಗಳು ಅದಕ್ಕೆ ಬೇಕಾದ 5,000 ರೂಪಾಯಿಗಳನ್ನು ಎಲ್ಲಾ ಸದಸ್ಯರ ದೇಣಿಗೆಯ ಮೂಲಕ ಸಂಗ್ರಹಿಸುವುದೆಂದು ತೀರ್ಮಾನಿಸಿದವು. ಒಂದೇ ದಿನದಲ್ಲಿ ಬೇಕಾದ ಹಣ ಒಟ್ಟಾಯಿತು. ಚಿಕಿತ್ಸೆ ನಡೆಯಿತು. ಈಗ ಆತ ಮಾಮೂಲಿನಂತೆ ಕೆಲಸ ಮಾಡುತ್ತಾನೆ. ಹೀಗೆ ಹಳ್ಳಿಯಲ್ಲಿನ ಒಬ್ಬರ ಸಮಸ್ಯೆ ಒಬ್ಬರ ಸಮಸ್ಯೆಯಾಗಿ ಉಳಿಯದೇ ಎಲ್ಲರ ಸಮಸ್ಯೆಯೆಂದು ಭಾವಿಸಿದ್ದರಿಂದ ಒಂದು ಪ್ರಾಣ ಉಳಿಯಿತು. ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು.

ತಾಡಿಕ್ಕರಂಕೋಣಮ್ ಪಶ್ಚಿಮ ಘಟ್ಟದ ಮೇಲಿರುವ ಇನ್ನೊಂದು ಸುಂದರ ಹಳ್ಳಿ. ಅಲ್ಲಿನ ಹೆಚ್ಚಿನವರು ತೋಟದ ಕೂಲಿಕಾರ್ಮಿಕರು. ಒಂದು ಕುಟುಂಬ ಕೂಲಿಗಾಗಿ ಬೇರೆ ಊರಿನಿಂದ ಅಲ್ಲಿಗೆ ಬಂದು ನೆಲೆಸಿತ್ತು. ಆ ಮನೆಯಲ್ಲಿ ಗಂಡಸರು ಯಾರೂ ಇಲ್ಲ. ತಾಯಿ, ಮಗಳು ಮತ್ತು ಮೊಮ್ಮಗಳು ಮಾತ್ರ. ತಾಯಿ ಮಗಳ ಕೂಲಿಯಿಂದಲೆ ಜೀವನ ಸಾಗಬೇಕು. ಇಂತಹ ಕಷ್ಟದಲ್ಲಿಯೂ ಮಗಳು ಅಲ್ಲಿನ ಸ್ವಸಹಾಯ ಸಂಘಕ್ಕೆ ಸದಸ್ಯಳಾದಳು. ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ಒಂದು ಪುಟ್ಟ ಗುಡಿಸಲು ಅವರದ್ದು. ಒಂದು ದಿನ ಇದ್ದಕ್ಕಿದ್ದ ಹಾಗೆ ಅವರ ಮನೆಗೆ ಬೆಂಕಿ ಬಿತ್ತು. ಹುಲ್ಲಿನ ಮಾಡಾದ್ದರಿಂದ ಕೇಳಬೇಕೇ? ಒಂದೇ ಕ್ಷಣದಲ್ಲಿ ಎಲ್ಲವೂ ಭಸ್ಮ. ಮರುದಿನ ಅವರೆಲ್ಲ ಬರಿಗೈಯಲ್ಲಿ ಬೀದಿಗೆ ಬಿದ್ದಿದ್ದರು. ಆಗ ಸ್ವಸಹಾಯ ಸಂಘದ ಜಾದೂ ನಡೆಯಿತು. ತಮ್ಮ ಸಂಘದ ಸದಸ್ಯೆಯ ಮನೆ ಕಟ್ಟಲು ಎಲ್ಲರೂ ಸೇರಿ ಹಣ ಹೊಂದಿಸಿದರು. ಮನೆ ಕಟ್ಟಲು ಬೇಕಾದ ಸಾಮಗ್ರಿ ತಂದರು. ಅವರೆಲ್ಲರೂ ಸ್ವತಃ ಕೂಲಿಯಾಳುಗಳಾಗಿ ಕೆಲಸ ಮಾಡಿ ಮನೆ ಕಟ್ಟಿಯೇ ಬಿಟ್ಟರು!

ಅರಮನ್ನಮ್ ಎಂಬ ಹಳ್ಳಿಯಲ್ಲಿ ನಡೆದ ಘಟನೆ ಮನಮುಟ್ಟುವಂಥದ್ದು. ಅಲ್ಲಿನ ಒಂದು ಮನೆಯಲ್ಲಿ ತಾಯಿ ಹಾಗೂ ಹೆಣ್ಣು ಮಕ್ಕಳಿಬ್ಬರು ಮಾತ್ರ ಇದ್ದರು. ತಾಯಿ ಅಲ್ಲೇ ಕೃಷಿ ಕೂಲಿ ಮಾಡಿದರೆ, ಇನ್ನೂ ಹದಿನೆಂಟೂ ತುಂಬಿರದ ಮಕ್ಕಳಿಬ್ಬರು ಆಂಧ್ರ ಪ್ರದೇಶದಲ್ಲಿ ಒಂದು ಸಣ್ಣ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಒಂದು ದಿನ ತಾಯಿಗೆ ಆರೋಗ್ಯ ಹದಗೆಟ್ಟಿತು. ಪರೀಕ್ಷೆ ಮಾಡಿದಾಗ ಕ್ಯಾನ್ಸರ್ ಖಾಯಿಲೆಯಿದೆಯೆಂದು ಗೊತ್ತಾಯಿತು. ಮಕ್ಕಳಿಬ್ಬರೂ ಕೆಲಸ ಬಿಟ್ಟು ತಾಯಿಯನ್ನು ನೋಡಿಕೊಳ್ಳಲು ಊರಿಗೆ ಬಂದರು. ಕೆಲವು ದಿನ ಕಳೆದಿತ್ತಷ್ಟೇ. ತಾಯಿ ಅಸುನೀಗಿದಳು. ಮಕ್ಕಳಿಬ್ಬರಿಗೆ ಯಾರೂ ಬೇರೆ ಗತಿಯಿಲ್ಲದಂತಾಯಿತು. ಶವಸಂಸ್ಕಾರಕ್ಕೂ ಅವರ ಬಳಿ ಹಣರವಿಲ್ಲಿಲ್ಲ. ಕೊನೆಗೆ ಸ್ವಸಹಾಯ ಸಂಘದ ಎಲ್ಲರೂ ಒಟ್ಟಾಗಿ ಶವಸಂಸ್ಕಾರ ಮಾಡಿದರು. ಮಕ್ಕಳಿಗೆ ಜೀವನ ನಿರ್ವಹಣೆಗೆ ಒಂದು ಕೆಲಸವೂ ದೊರೆಯುವಂತೆ ವ್ಯವಸ್ಥೆ ಮಾಡಿದರು. ಅಲ್ಲಿನ ಪಂಚಾಯಿತಿ ಸದಸ್ಯರೊಬ್ಬರ ನೆರನಿಂದ ಇಬ್ಬರು ಮಕ್ಕಳಿಗೂ ಮದುವೆ ವ್ಯವಸ್ಥೆ ಮಾಡಿದರು. ಒಟ್ಟಿನಲ್ಲಿ, ದಿಕ್ಕುಕಾಣದಾಗಿದ್ದ ಮಕ್ಕಳಿಗೆ ಸ್ವಸಹಾಯ ಸಂಘದ ಸದಸ್ಯರೇ ತಂದೆ ತಾಯಿಯ ಸ್ಥಾನದಲ್ಲಿ ನಿಂತು ಎಲ್ಲ ವ್ಯವಸ್ಥೆ ಮಾಡಿದರು.

ಇನ್ನೊಂದು ಊರಿನಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾದ ಯುವತಿಗೆ ಮರುಮದುವೆ ಮಾಡಿಸಿದ್ದು, ಮತ್ತೊಂದೆಡೆ ಊರಿಗೆ ಶಾಪವಾಗಿದ್ದ ಸಾರಾಯಿ ಅಂಗಡಿ ತೆರವಿಗೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಅದನ್ನು ಎತ್ತಂಗಡಿ ಮಾಡಿಸಿದ್ದು, ಆಯುರ್ವೇದ ಔಷಧಿ ಹೆಸರಿನಲ್ಲಿ ಮತ್ತು

7ನೇ ಪುಟಕ್ಕೆ

## ಬಾಲದೀವಿಗೆ

### ಸಹಬಾಳ್ವೆಯ ಮಂತ್ರ

ಜಪಾನ್ ಸಾಮ್ರಾಟ ಯಾಮಾತೋಗೆ ಒಬ್ಬ ವೃದ್ಧ ಮಂತ್ರಿಯಿದ್ದ. ಅವನ ಹೆಸರು ಓಚೋಸಾನ್. ಈತನ ಪರಿವಾರ ಬಲು ದೊಡ್ಡದು. ಪರಿವಾರದಲ್ಲಿ ಇದ್ದವರು ಒಂದು ಸಾವಿರ ಜನ. ಆದರೆ ಅವರೆಂದೂ ಮನಸ್ತಾಪ ಮಾಡಿಕೊಂಡವರಲ್ಲ, ಒಂದೇ ಆವರಣದಲ್ಲಿ ವಾಸ, ಊಟ, ತಿಂಡಿ ಇತ್ಯಾದಿ. ಐಕ್ಯದಿಂದ ಸೌಹಾರ್ದಪೂರ್ಣವಾಗಿ ಬಾಳುವ ಮೇಲ್ಪಂಕ್ತಿಯ ಕುಟುಂಬವೆಂದು ಅದು ಹೆಸರಾಯಿತು.

ಸಾವಿರ ಜನರನ್ನು ಸಂಭಾಳಿಸುವ ಕಲೆ ಸಾಮಾನ್ಯವಲ್ಲ. ಆದರೂ ಈ ಚಮತ್ಕಾರ ಕಣ್ಣ ಮುಂದಿದೆ. ಇದರ ರಹಸ್ಯ ತಿಳಿಯಲು ಯಾರಿಗೆ ತಾನೇ ಕುತೂಹಲ ಇರುವುದಿಲ್ಲ? ಒಮ್ಮೆ ರಾಜನೇ ಖುದ್ದಾಗಿ ಮಂತ್ರಿಯ ಮನೆಗೆ ಬಂದ. ಮಂತ್ರಿಯ ಕುಟುಂಬದ ಸೌಹಾರ್ದ ಜೀವನ ಗುಟ್ಟು ತಿಳಿಯುವಾ, ಎಂಬುದು ಅವನ ಮನದಾಸೆ.

ಔಪಚಾರಿಕ ಸ್ವಾಗತ, ಮೇಜುವಾನಿ, ಪರಿಚಯ ಎಲ್ಲಾ ಆಯಿತು. ರಾಜನೇ ವಿಷಯದ ಪೀಠಿಕೆ ಹಾಕಿದ. ನಮ್ಮ ದೇಶಕ್ಕೇ ಏಕೇ ವಿಶ್ವಕ್ಕೇ ಕಲಶಪ್ರಾಯವಾಗಿ ನಿಮ್ಮ ಸಹಬಾಳ್ವೆ ಹೇಗೆ ಸಾಧ್ಯವಾಗಿದೆ? ಅದರ ಕಟ್ಟುಪಾಡುಗಳೇನು? ಎಂದು ಪ್ರಶ್ನಿಸಿದ. ವೃದ್ಧ ಮಂತ್ರಿ ತಾನು ಹೇಳಬೇಕಾಗಿದ್ದ ವಿಷಯವನ್ನು ಬಾಯಲ್ಲಿ ತಿಳಿಸಲು ಇಚ್ಛಿಸದೆ, ಮೊಮ್ಮಗನಿಂದ ಕಾಗದದ ಹಾಳೆ, ತರಿಸಿಕೊಂಡು ಬರೆಯಲು ಆರಂಭಿಸಿದ. ಬರಹ ಬಲುಹೊತ್ತು ಹಿಡಿದೀತು. ನಂತರ ಆ ಕಾಗದವನ್ನು ದೊರೆಗೆ ಸಮರ್ಪಿಸಿದ. ಇಷ್ಟು ದೊಡ್ಡ ಕಾಗದವನ್ನು ಓದಿ, ಮನನ ಮಾಡಿಕೊಳ್ಳಲು ಬಹು ಸಮಯ ಹಿಡಿಯಿತು. ಕಟ್ಟುಪಾಡುಗಳು, ನಿಯಮಗಳು ಬಹಳ ಇರಬಹುದಾದುದರಿಂದ ಮನೆಗೆ ಹೋಗಿ ಓದುವುದೇ ಸೂಕ್ತವೆಂದು ಭಾವಿಸಿ ಅದನ್ನು ಜೇಬಿನಲ್ಲಿಟ್ಟುಕೊಂಡು ಮನೆ ಸೇರಿಕೊಂಡ. ಆಪ್ತರನ್ನು ಕರೆಸಿಕೊಂಡು ಅವರ ಮುಂದೆ ಪತ್ರ ತೆಗೆದ. ಅದು ದೊಡ್ಡದಾಗಿದ್ದುದು ನಿಜವಾದರೂ, ಇಡೀ ಕಾಗದದಲ್ಲಿ ಬರೆದಿದ್ದುದು ಒಂದೇ ಶಬ್ದ. ಆ ಶಬ್ದವನ್ನು ಒಂದು ಸಹಸ್ರ ಬಾರಿ ಮಂತ್ರದಂತೆ ಬರೆಯಲಾಗಿತ್ತು.

ಈ ಶಬ್ದ ಏನಿರಬಹುದು? ಒಂದೇ ಶಬ್ದವಾದರೂ ಎಷ್ಟು ಪ್ರಭಾವಿಯಾಗಿದ್ದಿರಬಹುದು, ಊಹಿಸಿ. ಆ ಪದವೇ "ಸಹನಶೀಲತೆ" ಎಂದಾಗಿತ್ತು. ಮತ್ತೆ ಭೇಟಿ ಆದಾಗ ಆತನು ರಾಜನಿಗೆ ಸಹಬಾಳ್ವೆಯ ಜೀವನದ ಗುಟ್ಟು ಸಹನಶೀಲತೆಯಲ್ಲೇ ಅಡಗಿದೆ ಎಂದು ಹೇಳುತ್ತಾ ಅನೇಕ ಪ್ರಕರಣಗಳನ್ನು ಅವನ ಮುಂದಿಟ್ಟ.

ಕೇವಲ ಅತ್ತೆ ಸೊಸೆಯರಿಬ್ಬರು, ಅಣ್ಣತಮ್ಮಂದಿರಿಬ್ಬರೇ ಒಂದು ಮನೆಯಲ್ಲಿ ಇರಲಾರದ ಇಂದಿನ ದಿನಗಳಲ್ಲಿ 'ಸಹನಶೀಲತೆ' ಎಂಬ ಈ ಮಂತ್ರ ಎಷ್ಟು ಬೆಲೆಯುಳ್ಳದ್ದು ಅಲ್ಲವೇ?

(ಕಾ. ಶ್ರೀ. ನಾಗರಾಜರವರ 'ದಿಗ್ಗಜರ ದಿಕ್ಸೂಚಿ–II' ಪುಸ್ತಕದಿಂದ)

## ಆರೋಗ್ಯ ಸೂತ್ರ

* ಎರಡು ಹೊತ್ತು ಊಟ ಮಾಡುವಂತೆ ಎರಡು ಹೊತ್ತು ನಿಯತ ವೇಳೆಗೆ ಶೌಚಕ್ಕೆ ಹೋಗಲೇಬೇಕು.
* ಮಲಮೂತ್ರವನ್ನೆಂದೂ ತಡೆಹಿಡಿಯಬಾರದು. ತಡೆಹಿಡಿದರೆ ಅದು ರೋಗಕ್ಕೆ ದಾರಿಯಾಗುತ್ತದೆ.
* ಮಾಂಸಾಹಾರ ಹೊಟ್ಟೆಗೆ ಜಡವೂ ತಂಗಳನ್ನವು ಮಲಬದ್ಧಕವೂ ಬುದ್ಧಿನಾಶಕವೂ ಆಗಿರುವುದರಿಂದ ಯಾವಾಗಲೂ ತಿನ್ನಬಾರದು.

**ನಾಗಪುರದಲ್ಲಿರುವ ಮಾಧವ ನೇತ್ರ ಬ್ಯಾಂಕ್ ಮೂಲಕ ಈ ವರ್ಷ 350 ಜನ ನೇತ್ರದಾನ ಮಾಡಿರುವುದನ್ನು ಗುರುತಿಸಿದ ಮಹಾರಾಷ್ಟ್ರ ಸರ್ಕಾರ ಸೇವಾ ಪುರಸ್ಕಾರ ಘೋಷಿಸಿದೆ.**

## ಹಬ್ಬ ಹರಿದಿನ

### ರಕ್ಷಾಬಂಧನ

ಶ್ರಾವಣಶುದ್ಧ ಪೂರ್ಣಿಮೆಯನ್ನು ನೂಲು ಹುಣ್ಣಿಮೆ, ರಕ್ಷಾ ಪೂರ್ಣಿಮೆ ಹಾಗೂ ನಾರಿಕೇಳ ಪೂರ್ಣಿಮೆ ಎಂದೂ ಕರೆಯುತ್ತಾರೆ. ಈ ರಕ್ಷಾ ಪೂರ್ಣಿಮೆಯಂದು ನಡೆಯುವ ರಕ್ಷಾಬಂಧನವು ನಮ್ಮ ಸಮಾಜದ ಸ್ತ್ರೀ ಪುರುಷರಲ್ಲಿ ಪರಸ್ಪರ ಸೋದರ ಸೋದರಿಯ ಪವಿತ್ರಸಂಬಂಧವನ್ನು ಭದ್ರಗೊಳಿಸುವ ಹಬ್ಬ. ಸ್ತ್ರೀಯರೆಲ್ಲರೂ ನನ್ನ ಅಕ್ಕ ತಂಗಿಯರು. ಅವರ ಮಾನ, ಪ್ರಾಣರಕ್ಷಣೆ ನನ್ನ ಆದ್ಯ ಕರ್ತವ್ಯ. ಈ ಕರ್ತವ್ಯದ ಪಾಲನೆಯಲ್ಲಿ ಪ್ರಾಣವನ್ನಾದರೂ ಒಪ್ಪಿಸಲು ಸಿದ್ಧನಾಗುವೆ ಎಂಬ ಪ್ರತಿಜ್ಞೆಯ ಸಂಕೇತ ರಕ್ಷೆ. ವ್ಯಕ್ತಿ ವ್ಯಕ್ತಿಗಳು ಪರಸ್ಪರ ಸಹಾಯ ತತ್ಪರರಾಗುವ ಸಾಮಾಜಿಕ ಬಾಂಧವ್ಯದ ಸಂಕೇತ ಇದು.

ಉತ್ತರ ಭಾರತದಲ್ಲಿ ಕೆಲವೆಡೆ ಇದನ್ನು ರಾಖೀ ಹಬ್ಬ ಎಂದು ಹೇಳುತ್ತಾರೆ. ಈ ದಿನ ಸೋದರಿಯರು ತಮ್ಮ ಸೋದರರ ಕೈಗೆ ರಾಖಿಯನ್ನು ಕಟ್ಟಿದರೆ, ಪುರೋಹಿತರು ಸಂರಕ್ಷಣೆಯ ಸಾಧನವಾಗಿ ರಕ್ಷಾಕವಚ, ರಕ್ಷಾಮಣಿ, ರಕ್ಷಾ ಬಂಧನವನ್ನು ಮಕ್ಕಳಿಗೆ, ಬಂಧು ಬಾಂಧವರಿಗೆ, ಗೃಹಸ್ಥರಿಗೆ ಕಟ್ಟುವ ಪದ್ಧತಿ ಹಿಂದಿನಿಂದಲೂ ಇದೆ.

ಆಚರಿಸುವ ವಿಧಾನ:–

ಈ ರಕ್ಷಾ ಬಂಧನದ ಶಾಸ್ತ್ರೀಯ ವಿಧಿ ಈ ರೀತಿ ಇದೆ. ಶ್ರಾವಣ ಶುದ್ಧ ಹುಣ್ಣಿಮೆಯಂದು ಮುಂಜಾನೆ ಎದ್ದು, ಸ್ನಾನಮಾಡಿ, ಹಳದಿಯ ಬಟ್ಟೆಯಲ್ಲಿ

ಪುಟ 6ಕ್ಕೆ



## ಯೋಗಾಸನ

### ಊರ್ಧ್ವ ಪ್ರಸಾರಿತ ಪಾದಾಸನ

ಹಾಸಿನ ಮೇಲೆ ಮುಖ ಮೇಲೆ ಮಾಡಿ ಮಲಗಿ ಕೈಗಳನ್ನು ದೇಹದ ಪಕ್ಕದಲ್ಲಿಟ್ಟು ನಿಧಾನವಾಗಿ ಉಸಿರನ್ನು ಬಿಡುತ್ತಾ ಎರಡು ಕೈಗಳನ್ನು ತಲೆಯ ಮೇಲಕ್ಕೆ ನೆಲದಲ್ಲಿ ಇಡಿ. ಕಾಲುಗಳನ್ನು ಮೇಲ್ಮುಖವಾಗಿ 30 ಡಿಗ್ರಿಗೆ ಎತ್ತಿ. ಸಹಜವಾಗಿ ಉಸಿರಾಡಿ. (ಚಿತ್ರದಲ್ಲಿ ತೋರಿಸಿದಂತೆ )



ಉಪಯೋಗ : ಜೀರ್ಣಕ್ರಿಯೆಗೆ ಸಹಾಯ. ಹೊಟ್ಟೆಯುಬ್ಬರ ಮತ್ತು ಹುಳಿತೇಗಿನ ದೋಷವನ್ನು ದೂರಮಾಡುವುದು.

# ಹೀಗೊಂದು ಸ್ವಸಹಾಯ ಸಂಘದ ಅನುಭವ

*ಹಿಂದು ಸೇವಾ ಪ್ರತಿಷ್ಠಾನದಲ್ಲಿ ಸೇವಾವ್ರತಿಯಾಗಿ ಕೆಲಸ ಮಾಡುವುದೇ ಒಂದು ವಿಶಿಷ್ಟ ಅನುಭವ. ತಮ್ಮ ಬಳಿ ಯಾವ ಪ್ರತಿಭೆಯೂ ಇಲ್ಲವೆಂದುಕೊಳ್ಳುತ್ತಾ ಸೇವಾವ್ರತಿಯಾಗಿ ಬರುವವರು ಕೆಲವರು. ಆದರೆ, ಇಲ್ಲಿನ ಶಿಕ್ಷಣ ಅಂತಹ ಅದೆಷ್ಟೋ ಮಂದಿಯಲ್ಲಿರುವ ಅದ್ಭುತ ಪ್ರತಿಭೆಯನ್ನು ಹೊರತೆಗೆಯುತ್ತದೆ. ಹೊರಗೆ ಹೋಗಿ ಕೆಲಸ ಮಾಡಲು, ಇತರರೊಡನೆ ಮಾತನಾಡಲು ಧೈರ್ಯವಿಲ್ಲದವರೂ ಕೂಡಾ ಒಂದು ವರ್ಷದಲ್ಲಿ ನೋಡಿದವರು ಬೆರಗಾಗುವ ರೀತಿಯಲ್ಲಿ ಬದಲಾಗಿದ್ದಾರೆ. 'ಮೂಕಂ ಕರೋತಿ ವಾಚಾಲಂ' ಎಂಬಂತೆ ಸೇವಾ ಕ್ಷೇತ್ರವು ಎಂತಹ ಸಾಮಾನ್ಯರಿಂದಲೂ ಅಸಾಮಾನ್ಯ ಕೆಲಸಗಳನ್ನು ಮಾಡಿಸುತ್ತದೆ! ಸೇವಾವ್ರತಿಯಾಗಿ ಕೆಲಸ ಮಾಡುವುದರಿಂದ ಸಮಾಜಕ್ಕಷ್ಟೇ ಅಲ್ಲದೇ ವೈಯುಕ್ತಿಕವಾಗಿ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ. ಜೀವನದಲ್ಲಿ ಒಮ್ಮೆ ಸೇವಾವ್ರತಿಯಾಗಿ ಕೆಲಸ ಮಾಡಿದವರು ಎಲ್ಲೇ ಹೋದರೂ ಎಲ್ಲರ ನಡುವೆ ಎದ್ದುಕಾಣುತ್ತಾರೆ. ಎಲ್ಲರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಅಂತಹ ಪೂರ್ವ ಸೇವಾವ್ರತಿಯೊಬ್ಬರ ಅನುಭವ ಇಲ್ಲಿದೆ ನಿಮಗಾಗಿ.*

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ನಮ್ಮೂರಿನಲ್ಲಿ (ಸಿರಸಿ ಸಮೀಪ ಬೂದಿಮುರುಡು) 'ಶುಭೋದಯ' ಎಂಬ ಹೆಸರಿನಲ್ಲಿ ಸ್ವಸಹಾಯ ಸಂಘದ ಆರಂಭವಾಯಿತು. ಪ್ರತಿ ಬುಧವಾರ ಒಂದು ಘಂಟೆ ಕಾಲ ಏನು ಮಾಡಬೇಕು ಎನ್ನುವುದರ ಬಗ್ಗೆ ಎಲ್ಲ ಮಾತೆಯರೂ ಮಾತನಾಡುತ್ತಿದ್ದರು. ಕಾಡುಹರಟೆಯನ್ನು ಮಾಡುವುದೇ ಆಗುತ್ತದೆ ಎಂದು ಊರವರೂ ಹೇಳುತ್ತಿದ್ದರು. ನನಗೆ ಮಾತ್ರ ಇದು ಸುವರ್ಣಾವಕಾಶವಾಯಿತು. ಆ ಸಮಯದಲ್ಲಿ ಯೋಗಾಸನ, ಪ್ರಾಣಾಯಾಮ, ಭಗವದ್ಗೀತೆ, ಭಜನೆ, ರಂಗೋಲಿ, ಆಶುಭಾಷಣ, ಆಶು ಅಭಿನಯ, ಚಾಪೆ ಹೆಣೆಯುವುದು (ಹಳೆಯ ಸೀರೆಯಿಂದ) ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡೆ. ಇದರಿಂದ ಮಾತೆಯರಲ್ಲಿ ಕೂಡ ಮಹತ್ತರ ಬದಲಾವಣೆ ಆಗುತ್ತಿದೆ. ತಪ್ಪದೇ ಭಜನೆಗಳು ಮನೆಗಳಲ್ಲಿ ಪ್ರಾರಂಭವಾಗಿದೆ. ಹೊಸತನ್ನು ಕಲಿಯುವ ಉತ್ಸಾಹ ಕಂಡುಬರುತ್ತಿದೆ. ಈಗ ಎಲ್ಲರೂ ಬುಧವಾರದ ನಿರೀಕ್ಷೆಯನ್ನು ಮಾಡುತ್ತಿರುತ್ತಾರೆ. ನಾಲ್ಕು ಜನರ ಮುಂದೆ ನಿಂತು ಮಾತನಾಡುವ ಕಲೆಯನ್ನು ರೂಢಿಸಿಕೊಂಡಿದ್ದಾರೆ. ನಮ್ಮ ಮನೆಗಳಲ್ಲಿ ಆಚರಿಸುವ ಉತ್ಸವಗಳ ಆಚರಣೆ ಮತ್ತು ಅದರ ಮಹತ್ವವನ್ನು ತಿಳಿಸಿದಾಗ, ಇಷ್ಟು ವರ್ಷ ಹಬ್ಬವೆಂದು ಆಚರಿಸಿಕೊಂಡು ಬರುತ್ತಿದ್ದೆವು. ಹಿನ್ನೆಲೆ ಮಾತ್ರ ಗೊತ್ತಿರಲಿಲ್ಲ. ಈ ವಯಸ್ಸಿನಲ್ಲಾದರೂ ಜ್ಞಾನಭಂಡಾರ ಹೆಚ್ಚಾಯಿತೆಂದು ಖುಷಿಪಟ್ಟರು ಹಲವರು.

ಸ್ವಸಹಾಯ ಸಂಘದ ಸದಸ್ಯರ ಮನೆಯವರಿಗೂ ಇದರಿಂದ ಸಂತೋಷ. 'ಹೆಂಗಸರಿಂದ ಇಷ್ಟುವರ್ಷ ಏನೂ ಹೊಸ ಷಯ ಸಿಗುತ್ತಿರಲಿಲ್ಲ. ನಾವು ಮಾಡುವ ಕೆಲಸವೇ ಸರಿ ಎಂದು ಅನಿಸುತ್ತಿತ್ತು. ಸಂಘ ಪ್ರಾರಂಭವಾಗಿದ್ದರಿಂದ ಹೆಂಗಸರಿಂದ ಪ್ರೇರಣೆ, ಹೊಸ ವಿಷಯಗಳು ದೊರಕುತ್ತಿವೆ' ಎನ್ನುತ್ತಾರೆ ಮನೆ ಮಂದಿ! ಮುಂದಿನ ಸಭೆಯಲ್ಲಿ ಏನು ಮಾಡವಿರಿ? ಹೊಸ ವಿಷಯ ಏನು ಕೊಡುವಿರಿ ಎಂದು ಬಹಳಷ್ಟು ಮನೆಗಳಲ್ಲಿ ಕೇಳಲು ಪ್ರಾರಂಭಿಸಿದ್ದಾರೆ. ಏನಾದರೂ ಸಹಾಯ ಬೇಕಾದಲ್ಲಿ ಊರಿನವರು ಕೂಡ 'ಸಂಘದವರಿಗೆ ಹೇಳಿ' ಎಂದು ಹೇಳುತ್ತಾರೆ. ನಮ್ಮ ಸಂಘದ ವರದಿ, ಅಲ್ಪ ಸಮಯದಲ್ಲಿ ಮಾಡಿದ ಸಾಧನೆಗಳಿಂದ ಸುತ್ತಮುತ್ತಲಿನ ಇತರ ಸ್ವಸಹಾಯ ಸಂಘದವರೂ ಪ್ರೇರಿತರಾಗಿದ್ದಾರೆ. ಹಲವು ಸಲಹೆಗಳನ್ನು ನಮ್ಮಿಂದ ಪಡೆಯುತ್ತಿದ್ದಾರೆ.

ಇವೆಲ್ಲಾ ಕೆಲಸಗಳನ್ನು ಮಾಡಲು ನನಗೆ ಶಕ್ತಿ ಕೊಟ್ಟಿರುವುದು ಪ್ರತಿಷ್ಠಾನದ ಶಿಕ್ಷಣ ಮತ್ತು ಎಂಟು ವರ್ಷದ ಸೇವಾವ್ರತಿ ಜೀವನದ ಅನುಭವಗಳು. ಜೊತೆಗೆ ಸಂಘದಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಮತ್ತು ಉತ್ಸಾಹವೂ ಪ್ರಮುಖವಾಗಿದೆ.

ಭ। ಪ್ರಮೋದಾ ಗಜಾನನ ಹೆಗಡೆ
ಬೂದಿಮುರಡು, ನೀಲೇಕಣಿ ಅಂಚೆ, ಶಿರಸಿ – 581401. ಉತ್ತರಕನ್ನಡ ಜಿಲ್ಲೆ

---

**ಹಬ್ಬ ಹರಿದಿನ** (ಪುಟ 5ರಿಂದ)

ಸ್ವಲ್ಪ ಕುಂಕುಮ–ಅಕ್ಷತೆಯನ್ನು ಕಟ್ಟಿ, ದೇವರ ಮುಂದೆ ಸ್ಥಾಪಿಸಿದ ಕಲಶದ ಮೇಲೆ ಇಡಬೇಕು. ಆಮೇಲೆ ಆ ಕಲಶವನ್ನು ವಿಧಿವತ್ತಾಗಿ ಪೂಜಿಸಿ, ಕುಂಕುಮಾಕ್ಷತೆಯುಳ್ಳ ಬಟ್ಟೆಯನ್ನು ತಮ್ಮ ಬಲಮುಂಗೈಗೆ, ಯಜಮಾನನು ಕಟ್ಟಿಕೊಳ್ಳುವುದಲ್ಲದೆ, ಆ ಸಮಯಕ್ಕೆ ಬಂದ ಆಪ್ತ–ಮಿತ್ರರ ಕೈಗೂ ಕಟ್ಟಬೇಕು. ಈ ಪದ್ಧತಿಯೇ ಇಂದು ಬೆಳೆದು, ಸೋದರ ಪ್ರೇಮವನ್ನು ಸ್ಥಿರಗೊಳಿಸುವ ಸದುದ್ದೇಶದಿಂದ ಅಂದ–ಚೆಂದದ ಪಟ್ಟಿಯನ್ನು ಕಟ್ಟುವ 'ರಾಖಿ' ಹಬ್ಬವಾಗಿ ಬೆಳೆದು ಬಂದಿದೆ. ಈ ಬಂಧನಕ್ಕಾಗಿ ಅಕ್ಕ–ತಂಗಿಯರಿಗೆ ಬಂಧುಗಳು ಉಡುಗೊರೆ ಕೊಡುವುದೂ ಉಂಟು. ಈ ರೀತಿ ರಾಖಿಯನ್ನು ಕಟ್ಟುವಾಗ –

ಯೇನ ಬದ್ಧೋ ಬಲೀರಾಜಾ ದಾನವೇಂದ್ರೋ ಮಹಾಬಲಃ ।
ತೇನ ತ್ವಾಂ ಪ್ರತಿಬಧ್ನಾಮಿ, ರಕ್ಷೇ ಮಾ ಚಲ ಮಾ ಚಲ ॥

ಎಂಬ ಮಂತ್ರವನ್ನು ಹೇಳಬೇಕು. ಈ ರಕ್ಷಾ ಬಂಧನದ ಮಹತ್ವವನ್ನು ಧರ್ಮಶಾಸ್ತ್ರದಲ್ಲಿ ಹೀಗೆ ಹೇಳಿದೆ.

ಸರ್ವರೋಗೋಪಶಮನಂ ಸರ್ವಾಶುಭನಾಶಿನಂ ।
ಸಕೃತ್ ಕೃತೇನಾಬ್ದಮೇಕಂ ಯೇನ ರಕ್ಷಾ ಕೃತೋಭವೇತ್ ॥

ಅಂದರೆ ಈ ರಕ್ಷಾ ಬಂಧನವೂ ಸರ್ವ ರೋಗಗಳನ್ನು ದೂರಮಾಡುವದಲ್ಲದೆ, ಸಮಸ್ತ ಅಶುಭಗಳನ್ನೂ ನಿವಾರಿಸುತ್ತದೆ. ಯಾವನು, ಒಬ್ಬನಿಗಾದರೂ ಇದನ್ನು ಕಟ್ಟುತ್ತಾನೋ ಅವನು ಆ ವರ್ಷವಿಡೀ ಸರ್ವರೋಗಗಳ ಬಾಧೆಯಿಂದ ರಕ್ಷಿತನಾಗುತ್ತಾನೆ.

ರಕ್ಷಾ ಬಂಧನದ ವಿಚಾರದಲ್ಲಿ ಅನೇಕ ಐತಿಹಾಸಿಕ ಘಟನೆಗಳನ್ನು ಹೇಳಲಾಗುತ್ತದೆ. ಕೆಲವು ರಾಜರು ಮೊದಲು ಶತ್ರು ರಾಜರನ್ನು ಸದೆಬಡಿಯಲು ಮನಮಾಡಿ, ಅನಂತರ ಆ ಶತ್ರುರಾಜರ ಮಗಳ ಕೈಯಿಂದ ರಾಖಿಯನ್ನು ಕಟ್ಟಿಸಿಕೊಂಡಾಗ ಹಿಂದಿನ ವೈರವನ್ನೇ ಮರೆತು ಅವರೊಂದಿಗೆ ಸಹಜ ಮಿತ್ರರಾಗುತ್ತಿದ್ದರಂತೆ.

ಜಾತಿ, ಮತ, ಧರ್ಮ, ಪಂಥ, ಪ್ರಾಂತ, ಭಾಷೆಗಳ ಹೆಸರಿನಲ್ಲಿ ಸಮಾಜದ ಏಕತೆ ನುಚ್ಚುನೂರಾಗುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ರಾಷ್ಟ್ರದ ಐಕ್ಯತೆ, ಮಕ್ಕಳಲ್ಲಿ ಅಭೇದ್ಯ ಸ್ನೇಹ–ಸಹಕಾರ ಮನೋಭಾವ, ರಾಷ್ಟ್ರರಕ್ಷಣೆಗಾಗಿ ಸರ್ವಸ್ವವನ್ನೂ ಅರ್ಪಿಸುವ ಮನೋಭಾವ, ಪರಸ್ತ್ರೀ–ಪುರುಷರಲ್ಲಿ ಸೋದರ ಮನೋಭಾವ ಬೆಳೆಸಿಕೊಳ್ಳಬೇಕಾದ್ದು ಅತ್ಯಗತ್ಯವಾಗಿದೆ. ಇಂತಹ ಸಂದಭದಲ್ಲಿ, ಸ್ನೇಹ ಸಂಜೀನೀ ಮಂತ್ರದ ಸಂಕೇತವಾದ ರಕ್ಷಾ ಬಂಧನ ಹಬ್ಬ ಮಹತ್ವದ್ದಾಗಿದೆ. ●

# ನೀವೂ ಓದಿ

## ವೀರ ಸಂನ್ಯಾಸಿ ವಿವೇಕಾನಂದ

ಸ್ವಾಮಿ ವಿವೇಕಾನಂದರ ಜೀವನದ ಬಗ್ಗೆ ಕೇಳದವರಿಲ್ಲ, ಅವರ ಜೀವನದಿಂದ ಸ್ಫೂರ್ತಿ ಪಡೆದವರು ಅದೆಷ್ಟು ಜನರೋ ದೇವರೇ ಬಲ್ಲ. ಹಿಂದೂ ಧರ್ಮದ ಪುನರುತ್ಥಾನಕ್ಕೆ ವಿವೇಕಾನಂದರ ಕೊಡುಗೆ ಅಪಾರ. ನಾವೆಲ್ಲರೂ ಅವರ ಜೀವನದ ಬಹಳ ಮುಖ್ಯ ಘಟನೆಗಳ ಬಗ್ಗೆ ಓದಿರುತ್ತೇವೆ. ಅವರ ಬಾಲ್ಯದ ಕೆಲವು ಘಟನೆಗಳು, ರಾಮಕೃಷ್ಣರ ಭೇಟಿ, ಚಿಕಾಗೋ ಸಮ್ಮೇಳನ ಇತ್ಯಾದಿ ಇತ್ಯಾದಿ. ಆದರೆ, ಅದರ ಬಗ್ಗೆ ವಿಸ್ತಾರವಾಗಿ ತಿಳಿದುಕೊಳ್ಳುವ ಅವಕಾಶ ನಮಗೆ ಸಿಗದಿರಬಹುದು. ವಿವೇಕಾನಂದರ ಬಾಲ್ಯದಿಂದ ಹಿಡಿದು ರಾಮಕೃಷ್ಣ ಸಂಘದ ಸ್ಥಾಪನೆ, ಅನಂತರ ಅವೆಲ್ಲಾ ಬಂಧನಗಳನ್ನು ಬಿಡಿಸಿಕೊಂಡು ಪರಿವ್ರಾಜಕನಾಗಿ ಹೊರಡುವವರೆಗಿನ ಅವರ ಜೀವನದ ಎಲ್ಲಾ ಘಟನೆಗಳನ್ನು ಆಮೂಲಾಗ್ರವಾಗಿ ಶೋಧಿಸಿ, ಬರೆದ ವಿಸ್ತೃತ ಕಥನವನ್ನುಳ್ಳ ಪುಸ್ತಕವೇ 'ವೀರ ಸಂನ್ಯಾಸಿ ವಿವೇಕಾನಂದ'. ಸ್ವಾಮಿ ಪುರುಷೋತ್ತಮಾನಂದರು ಬರೆದ ಈ ಪುಸ್ತಕದ ಹೆಸರು ನೋಡಿದ ಕೂಡಲೇ, ಇದು ಸಂನ್ಯಾಸಿಗಳ ವಿಚಾರವಿರಬಹುದು ಸಂಸಾರಿಗಳಿಗೇಕೆ ಎಂದೆನಿಸಬಹುದು. ಆದರೆ, ವಾಸ್ತವದಲ್ಲಿ ಹಾಗಿಲ್ಲ, ವಯೋಭೇದವಿಲ್ಲದೇ, ಲಿಂಗಭೇದವಿಲ್ಲದೇ ಎಲ್ಲರೂ ಓದಬಹುದಾದ ಪುಸ್ತಕ ಇದು. ನಮ್ಮಲ್ಲೇಳುವ ಅನೇಕ ಪ್ರಶ್ನೆಗಳಿಗೆ ವಿವೇಕಾನಂದರ ಜೀವನದಲ್ಲಿರುವ ಉತ್ತರಗಳು ಇದರಲ್ಲಿ ಅಡಕವಾಗಿವೆ.

ಬಾಲಕ ನರೇಂದ್ರನ ಮನಸ್ಸಿನಲ್ಲಿನ ತೊಳಲಾಟಗಳು, ಅಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುವಲ್ಲಿ ಆತನ ಪ್ರಯತ್ನಗಳು, ಅದನ್ನೆಲ್ಲಾ ಪರಿಹರಿಸಿಕೊಂಡು ಆತ ಹೇಗೆ ವೀರ ಸಂನ್ಯಾಸಿಯಾದ ಎನ್ನುವುದನ್ನೂ, ಅಂತಹ ವೀರ ಸಂನ್ಯಾಸಿಯನ್ನು ರೂಪಿಸುವುದರಲ್ಲಿ ರಾಮಕೃಷ್ಣರ ಪಾತ್ರವೇನು ಎನ್ನುವುದನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ಬರೆದಿದ್ದಾರೆ. ಬಾಲಕ ನರೇಂದ್ರನಲ್ಲಿದ್ದ ದೇವರನ್ನು ಕಾಣುವ ತವಕ, ಗುರು ಶಿಷ್ಯರ ಅಪೂರ್ವ ಪ್ರೀತಿ ಬಾಂಧವ್ಯಗಳನ್ನು ತಿಳಿಸುವ ಅನೇಕ ಘಟನೆಗಳು, ರಾಮಕೃಷ್ಣ ಪರಂಪರೆಯ ಇತರ ಸಂನ್ಯಾಸಿಗಳ ಜೊತೆಗಿನ ವಿವೇಕಾನಂದರ ಒಡನಾಟ, ವಿವೇಕಾನಂದರ ವಿಶೇಷ ಆಧ್ಯಾತ್ಮಿಕ ಅನುಭವಗಳು, ಅವರ ಜೀವನದಲ್ಲಿ ನಡೆದ ರೋಮಾಂಚನಕಾರಿ ಘಟನೆಗಳು, ಎಲ್ಲಾ ವಿಷಯಗಳ ಬಗ್ಗೆ ವಿವೇಕಾನಂದರಿಗಿದ್ದ ಬೆರಗುಗೊಳಿಸುವ ಜ್ಞಾನ, ಅವರ ಅಸಾಧಾರಣ ಪ್ರತಿಭೆ – ಇವುಗಳನ್ನು ತಿಳಿಸುವ ಅನೇಕ ಘಟನೆಗಳ ಸುಂದರ ವಿವರಣೆ ಇಲ್ಲಿ ದೊರೆಯುತ್ತದೆ. ವಿವೇಕಾನಂದರ ಜೀವನದ ಬಗ್ಗೆ ತಿಳಿದುಕೊಳ್ಳಲು ಬಯಸುವ ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ ಇದು.

ಸ್ವಾಮಿ ವಿವೇಕಾನಂದರ ಸಮಗ್ರ ಜೀವನ ಚರಿತೆಯ ಮೊದಲ ಸಂಪುಟ ಇದು. ಇದಲ್ಲದೇ, ಅವರ ಜೀವನದ ಬೇರೆ ಬೇರೆ ಹಂತಗಳನ್ನು ನಮ್ಮ ಮುಂದೆ ತೆರೆದಿಡುವ ಇನ್ನೂ ಅನೇಕ ಪುಸ್ತಕಗಳು ಈ ಸರಣಿಯಲ್ಲಿವೆ. ಎಲ್ಲವೂ ಸಂಗ್ರಹಯೋಗ್ಯ ಪುಸ್ತಕಗಳು. ಈ ಪುಸ್ತಗಳೇನು ಹೊಸದಾಗಿ ಪ್ರಕಟವಾದವುಗಳಲ್ಲವಾದರೂ ಯಾವಾಗಲೂ ಎಲ್ಲರಿಗೂ ಉಪಯೋಗ ವಾಗುವಂಥವೆಂಬುದು ಮಾತ್ರ ಸತ್ಯ.

| | |
|---|---|
| ಪುಸ್ತಕದ ಹೆಸರು | : ವೀರ ಸಂನ್ಯಾಸಿ ವಿವೇಕಾನಂದ |
| ಲೇಖಕರು | : ಸ್ವಾಮಿ ಪುರುಷೋತ್ತಮಾನಂದ |
| ಪ್ರಕಾಶಕರು | : ಶ್ರೀ ರಾಮಕೃಷ್ಣಾಶ್ರಮ, ಮೈಸೂರು |
| ಪ್ರಕಟಣೆಯ ವರ್ಷ | : 1986 |
| ಬೆಲೆ | : 60 ರೂ. |

**ಸಹಕಾರ ಭಾರತಿ ಸಂಘಟನೆಯ ಜೊತೆ ದೇಶದಾದ್ಯಂತ 3.5 ಲಕ್ಷ ಸ್ವಸಹಾಯ ಗುಂಪುಗಳು ಕೆಲಸ ಮಾಡುತ್ತಿವೆ.**

### ಕನ್ಯಾಕುಮಾರಿಯಲ್ಲಿ ಹೀಗೊಂದು ಸಾಧನೆ

ಪುಟ 4ರಿಂದ

ಬರುವ ಔಷಧಿ ತಯಾರಿಸಿ ಹಣ ಮಾಡುತ್ತಿದ್ದ ಕಾರ್ಖಾನೆಯನ್ನು ನಿಲ್ಲಿಸಿದ್ದೇ ಅಲ್ಲದೇ, ಕೋರ್ಟಿನ ಮೆಟ್ಟಿಲೇರಿ ಆ ಔಷಧಿಯನ್ನು ಸಂಪೂರ್ಣ ನಿಷೇಧಿಸಿಸುವಂತೆ ಮಾಡಿದ್ದು, ಇನ್ನೊಂದೆಡೆ ಬೇರೆ ಜಾತಿಗೆ ಸೇರಿದ ಇಬ್ಬರನ್ನು ಸಂಘದಿಂದ ಕೈಬಿಡುವಂತೆ ಊರಿನ ಜಾತಿ ಸಂಘದಿಂದ ಹಣದ ಆಮಿಷ ಬಂದರೂ ಅದನ್ನು ತಿರಸ್ಕರಿಸಿ ಎಲ್ಲಾ ಜಾತಿಯವರೂ ಒಟ್ಟಿಗೆ ಕೆಲಸ ಮಾಡಿದ್ದು – ಹೀಗೆ ಈ ಸ್ವಸಹಾಯ ಸಂಘಗಳ ಯಶೋಗಾಥೆ ಸಾಗುತ್ತದೆ. ಅಲ್ಲಿಗೇ ನಿಲ್ಲುವುದಿಲ್ಲ ಇವರ ಕಥೆ. ಸಂಘದ ಸದಸ್ಯರು ಪ್ರತೀದಿನ ಮನೆಯಲ್ಲಿ ಅನ್ನ ಮಾಡುವಾಗ ಒಂದು ಹಿಡಿ ಅಕ್ಕಿಯನ್ನು ತೆಗೆದಿಡುತ್ತಾರೆ. ಸಂಗ್ರಹವಾದ ಅಕ್ಕಿಯಿಂದಲೇ ಒಂದು ಅನಾಥಾಶ್ರಮವನ್ನು ನಡೆಸುತ್ತಿದ್ದಾರೆ. ಈ ಅಕ್ಕಿ ಕನ್ಯಾಕುಮಾರಿ ಜಿಲ್ಲೆಯ ಇತರ ಅನಾಥಾಶ್ರಮಗಳಿಗೂ ಸಾಕಾಗುತ್ತದೆಯಂತೆ!

ಸ್ವಸಹಾಯ ಸಂಘಗಳೆಂದರೆ ಮನೆಯಲ್ಲಿ ಕೆಲಸವಿಲ್ಲದ ಹೆಂಗಸರು ಒಟ್ಟುಸೇರಿ ಹರಟೆ ಹೊಡೆಯುವ ತಾಣವಲ್ಲ ಎನ್ನುವುದನ್ನು ಈ ಸಂಘಗಳು ತೋರಿಸಿವೆ. ಹಾಗಾದರೆ, ಈ ಸಂಘಗಳನ್ನು ಪ್ರಾರಂಭಿಸಿದವರು, ಅವರಿಗೆ ಮಾರ್ಗದರ್ಶನ ಮಾಡುತ್ತಿರುವವರು ಯಾರು? ಸಹಜ ಕುತೂಹಲ ಅಲ್ಲವೇ? 'ಸೇವಾಭಾರತಿ'ಯ ತಮಿಳುನಾಡು ಘಟಕವೇ ಈ ಕೆಲಸ ಮಾಡುತ್ತಿರುವುದು. 1999ರಲ್ಲಿ ಪ್ರಾರಂಭವಾದ ಸ್ವಸಹಾಯ ಸಂಘಗಳು ಇಂದು ತುಳುನಾಡಿನೆಲ್ಲೆಡೆ ಪಸರಿಸಿ, ಅಲ್ಲಿನ ಆರ್ಥಿಕ ವ್ಯವಸ್ಥೆಯ ಒಂದು ಭಾಗವೇ ಆಗಿವೆ. 'ಸೇವಾಭಾರತಿ'ಯು ಇಲ್ಲಿ 4000 ಮಹಿಳಾ ಸ್ವಸಹಾಯ ಸಂಘಗಳನ್ನೂ, 400 ಪುರುಷ ಸ್ವಸಹಾಯ ಸಂಘಗಳನ್ನೂ ನಡೆಸುತ್ತಿದೆ ಎಂದರೆ ಆಶ್ಚರ್ಯವಾಗದಿರದು! ಮೇಲಿನ ಎಷ್ಟೋ ಉದಾಹರಣೆಗಳನ್ನು ನೋಡಿದಾಗ ಸೇವಾಭಾರತಿಯು ತನ್ನ ಸ್ವಸಹಾಯ ಸಂಘಗಳ ಸದಸ್ಯರಿಗೆ ಹಣ ಸೇರಿಸುವುದು, ಸ್ವ ಉದ್ಯೋಗ ಕೈಗೊಳ್ಳಲು ಮಾರ್ಗದರ್ಶನ ಮಾಡುವುದಷ್ಟೇ ಅಲ್ಲದೇ, ಎಂತಹ ಸಂಸ್ಕಾರ ನೀಡುತ್ತಿದೆ ಎನ್ನುವುದೂ ಅರ್ಥವಾಗುತ್ತದೆ. ಊರಿನ ಎಲ್ಲರೂ ಒಂದೇ ಕುಟುಂಬದಂತೆ ಬದುಕುವಂತಹ ಸ್ಥಿತಿ ಈ ಸಂಘಗಳಿಂದ ನಿರ್ಮಾಣವಾಗುತ್ತಿದೆ. ಅಲ್ಲದೇ, ಅನೇಕ ಸೇವಾಕಾರ್ಯಗಳನ್ನು ಸೇವಾಭಾರತಿಯು ಅಲ್ಲಿನ ಸ್ವಸಹಾಯ ಸಂಘಗಳ ಮೂಲಕ ನಡೆಸುತ್ತಿದೆ. ಲಿಂಗತಾರತಮ್ಯ, ಅಸಮಾನತೆ, ಜಾತೀಯತೆ ಇವುಗಳನ್ನು ಹೋಗಲಾಡಿಸಿ, ಭಾರತೀಯ ಸಂಸ್ಕೃತಿಯನ್ನು ಜನಜೀವನದಲ್ಲಿ ಅಳವಡಿಸಿಕೊಳ್ಳುವಲ್ಲಿ ಇಲ್ಲಿನ ಸ್ವಸಹಾಯ ಸಂಘಗಳು ಮಾಡುತ್ತಿರುವ ಕೆಲಸ ನಿಜಕ್ಕೂ ಇತರರಿಗೂ ಮಾದರಿ.

ಸಂಪಾದಕೀಯ ಸಹಕಾರ

ಶ್ರೀಮತಿ ಮೃದುಲಾ ವಿಜಯೇಂದ್ರ,
ಶ್ರೀಮತಿ ವರಲಕ್ಷ್ಮಿ,
ಶ್ರೀ ನರೇಂದ್ರ

RNI No. KAR KAN/2005/22027 Postal Registration No. KA/RNP/BGS/2041/2008-2010



## ಹಜ್ಜೆ ಗುರುತು

# ಸಂಸ್ಕೃತ ಬೇಡವೆಂದವರಿಂದಲೇ ಸಂಭಾಷಣ ಶಿಬಿರಕ್ಕೆ ಆಹ್ವಾನ

ಸೇವಾವ್ರತಿನಿಯಾಗಿ ಹೊರಬಂದಾಗ ಮನೆಯಲ್ಲಿ ತಂದೆಯನ್ನು ಬಿಟ್ಟು ಉಳಿದವರೆಲ್ಲರ ವಿರೋಧವಿತ್ತು. 1998ರಲ್ಲಿ ಸಂಸ್ಕೃತ ವಿಭಾಗದ ಸೇವಾವ್ರತಿನಿಯಾಗಿ ಹುಬ್ಬಳ್ಳಿಗೆ ಕಾಲಿಟ್ಟೆ. ಒಮ್ಮೆ ಅಲ್ಲಿನ ಟಿ.ಸಿ.ಎಚ್. ಮಹಾವಿದ್ಯಾಲಯದ ಪ್ರಾಂಶುಪಾಲರ ಭೇಟಿಯಾಗಿತ್ತು. ಅಲ್ಲಿ ಸಂಸ್ಕೃತ ಶಿಬಿರವನ್ನು ಮಾಡಲು ಅವಕಾಶ ಕೇಳಿದಾಗ ಅವರು ಸತ್ತಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಮೌಲ್ಯಗಳನ್ನು ಸಾರುವ ವಚನಸಾಹಿತ್ಯವನ್ನು ಬೋಧನೆ ಮಾಡಿದರೆ ನಿಮ್ಮ ಕಾರ್ಯ ಸಾರ್ಥಕ. ಇಲ್ಲವಾದರೆ ನೀವು ಮಾಡುತ್ತಿರುವ ಕೆಲಸ ವ್ಯರ್ಥದ್ದು ಎಂದು ತಮ್ಮ ನಕಾರವನ್ನು ವ್ಯಕ್ತಪಡಿಸಿದರು. ಈ ಮಾತುಗಳಿಂದ ಧೃತಿಗೆಡದ ನಾನೂ ಹಾಗೂ ಉಳಿದ ಸೇವಾವ್ರತಿನಿಯರು, ಇವರಿಗೆ ಪ್ರತಿಷ್ಠಾನದ ಸಂಪೂರ್ಣ ಪರಿಚಯ ಮಾಡಿಸಬೇಕೆಂದು ತೀರ್ಮಾನಿಸಿದೆವು. ಆದರೆ ಹೇಗೆ? ಇವರು ಪ್ರತಿಷ್ಠಾನವನ್ನು ಅರ್ಥೈಸಿಕೊಳ್ಳುವುದೂ, ಬಿಡುವುದು ನಾವಾಡುವ ಭಾಷೆ, ಉಪಯೋಗಿಸುವ ಶಬ್ದಗಳು, ಧೈರ್ಯ, ಆತ್ಮಶ್ವಾಸ - ಇವುಗಳಿಂದಲೇ ನಿರ್ಣಯವಾಗುತ್ತದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರೊಂದಿಗೆ ದೀರ್ಘವಾಗಿ ಚರ್ಚಿಸಿದೆವು. ವಚನಸಾತ್ಯ, ಸಂಸ್ಕೃತ ಮಾತ್ರವಲ್ಲದೇ ಎಲ್ಲ ಭಾಷೆ ಹಾಗೂ ಸಾಹಿತ್ಯಗಳ ಅವಶ್ಯಕತೆ ಈ ಸಮಾಜಕ್ಕಿದೆ. ಹಾಗೆಂದು ಒಂದೇ ದೃಷ್ಟಿಕೋನದಲ್ಲಿ ಯಾವುದರ ಬಗ್ಗೆಯೂ ನಿರ್ಣಯವನ್ನು ತಾಳಬಾರದು ಎಂಬುದಾಗಿ ನಮ್ಮ ವಿಚಾರವನ್ನು ಮಂಡಿಸಿದೆವು.

ಇದರ ಪರಿಣಾಮವಾಗಿ ಕೆಲದಿನಗಳ ನಂತರ ನಮ್ಮನ್ನು ಅವರೇ ಎನ್.ಸಿ.ಸಿ. ಶಿಬಿರದಲ್ಲಿ ಸಂಸ್ಕೃತ ಸಂಭಾಷಣೆ ಹಾಗೂ ಯೋಗಾಸನಗಳನ್ನು ಕಲಿಸಲು ಆಹ್ವಾನಿಸಿದರು. ಇದೊಂದು ಸವಾಲೆಂದು ತಿಳಿದ ನಾವು 10 ದಿನಗಳ ಕಾಲ ನಡೆದ ಆ ಶಿಬಿರದಲ್ಲಿ ಊಟ ವಸತಿ ಮಾಡಿದೆವು. ನಂತರ ಪ್ರಾಂಶುಪಾಲರು ನಮ್ಮ ಸೇವಾಕಾರ್ಯವನ್ನು ನೋಡಿ, ಪರಿವರ್ತಿತರಾಗಿ ಸೇವಾವ್ರತಿಗಳನ್ನು ತನ್ಮೂಲಕ ಪ್ರತಿಷ್ಠಾನವನ್ನು ಶ್ಲಾಘಿಸಿದರು.

ಹೀಗೆ ಸಂದರ್ಭಕ್ಕೆ ಸರಿಯಾಗಿ ನಮ್ಮ ಪ್ರತಿಭೆ, ಆತ್ಮವಿಶ್ವಾಸಗಳನ್ನು ಜೋಡಿಸಿಕೊಂಡು ಮುನ್ನುಗ್ಗುವ ಶಕ್ತಿ ನನಗೆ ಒದಗಿಬಂದದ್ದು ಪ್ರತಿಷ್ಠಾನದಿಂದಲೇ. ಪ್ರತಿಷ್ಠಾನದ ಸಂಸ್ಕಾರ ಸಾಧಾರಣವಾದದ್ದಲ್ಲ, ಇಲ್ಲಿನ ಸಂಸ್ಕಾರ ಮಣ್ಣಿನ ಮುದ್ದೆಯನ್ನು ಸುಂದರ ಮೂರ್ತಿಯನ್ನಾಗಿಸಬಲ್ಲದು ಎಂಬುದು ನನ್ನ ಅನುಭವ.

- ಭ। ಸುವರ್ಣಾ
ಪೂರ್ವ ಸೇವಾವ್ರತಿ, ಸಂಸ್ಕೃತ ಉಪನ್ಯಾಸಕಿ, ಬೆಂಗಳೂರು

## ವದತ ಸಂಸ್ಕೃತಮ್

ಮಹಿಲಾ : ಹರಿಃ ಓಂ। ನಮಸ್ತೆ ಲೀಲೆ ।
(ಹರಿಃ ಓಂ ಲೀಲಾ ನಮಸ್ತೆ)

ಶಿಕ್ಷಿಕಾ : ನಮಸ್ತೆ, ಕುಶಲಂ ವಾ?
(ನಮಸ್ತೆ ಚೆನ್ನಾಗಿದ್ದೀರಾ?)

ಮಹಿಲಾ : ಕುಶಲಂ, ಕುತ್ರ ಗಚ್ಛತಿ?
(ಚೆನ್ನಾಗಿದ್ದೀನಿ, ಎಲ್ಲಿಗೆ ಹೋಗ್ತಾ ಇದ್ದೀರಿ)

ಶಿಕ್ಷಿಕಾ : ಶಾಲಾಂ ಗಚ್ಛಾಮಿ।
(ಶಾಲೆಗೆ ಹೋಗ್ತಾ ಇದ್ದೇನೆ)

ಮಹಿಲಾ : ಶಾಲಾ ಕದಾ ಆರಬ್ಧಾ?
(ಶಾಲೆ ಯಾವಾಗ ಆರಂಭ ಆಯ್ತು?)

ಶಿಕ್ಷಿಕಾ : ಜೂನ್ ಪ್ರಥಮ ದಿನಾಂಕತಃ ಆರಬ್ಧಾ। ಭವತೀ ಕುತ್ರ ಗಚ್ಛತಿ?
(ಜೂನ್ ಒಂದನೇ ತಾರೀಖಿನಿಂದ ಆರಂಭ ಆಯ್ತು.
ನೀವು ಎಲ್ಲಿಗೆ ಹೋಗ್ತಾ ಇದ್ದೀರಿ?)

ಮಹಿಲಾ : ಅಹಂ ಮಂದಿರಂ ಗಚ್ಛಾಮಿ। ಅಸ್ತು ಆಗಚ್ಛಾಮಿ ವಾ? ರಾಂ ರಾಂ।
(ನಾನು ದೇವಸ್ಥಾನಕ್ಕೆ ಹೋಗ್ತಾ ಇದ್ದೇನೆ. ಆಯ್ತು ಬರ್ಲಾ? ರಾಂ ರಾಂ.)

ನಿಮ್ಮೂರಿನ ಸೇವಾ ಚಟುವಟಿಕೆಗಳ ಸುದ್ದಿ ಮತ್ತು ಪ್ರೇರಣಾದಾಯಿ ಸಂಗತಿಗಳನ್ನು ಹೊತ್ತು ತರುತ್ತಿರುವ ಸೇವಾದಿಶಾ ಕ್ಕೆ ಓದುಗರೇ ಪೋಷಕರು. ನಿಮ್ಮ ಚಂದಾ ಅವಧಿ ಮುಗಿದಿದ್ದಲ್ಲಿ ನವೀಕರಿಸಲು ನಮ್ಮ ವಿಳಾಸಕ್ಕೆ ಬರೆಯಿರಿ.

''ಸೇವಾದಿಶಾ''ವನ್ನು ಇನ್ನೂ ಹೆಚ್ಚಿನ ಜನರಿಗೆ ತಲುಪಿಸಲು ನಿಮ್ಮ ಪರಿಚಯದವರನ್ನು ಚಂದಾದಾರರನ್ನಾಗಿಸಿ

ಅಂಚೆ ವೆಚ್ಚ ಸೇರಿ : ವಾರ್ಷಿಕ ಚಂದಾ ರೂ. 50/-
ಪೋಷಕ ಸದಸ್ಯರು : ರೂ. 500/-
(5 ವರ್ಷಗಳ ಕಾಲ ಪತ್ರಿಕೆಯನ್ನು ಕಳಿಸಲಾಗುವುದು)

## ಅಮೃತ ಬಿಂದು

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ।।

ದೊಡ್ಡವರು ಮಾಡಿದ್ದನ್ನೇ ಇತರರು ಮಾಡುತ್ತಾರೆ. ದೊಡ್ಡವರು ಯಾವುದನ್ನು ಪ್ರಮಾಣವೆಂದು ಹೇಳುತ್ತಾರೋ ಅದನ್ನೇ ಎಲ್ಲರೂ

**Postal Registration No.**
**KA/RNP/BGS/2041/2008-2010**
**RNI No. KAR KAN /2005/22027**
Office of Posting : Basavanagudi
H.P.O.,BG-4. 15th of every month

ಖಇಛಾಂ ಆಖಖಉಊಂ
**ಸೇವಾ ದಿಶಾ**
ಜುಲೈ-2009

**ಇವರಿಗೆ,**

Printed, Published, Owned by **K. S. Nagabhushan** and Printed at **Rashtrotthana Mudranalaya**, K. G. Nagar, Bangalore - 560 019
and Published at **Ajitasri,** 8/28, Basavanagudi Road, Bangalore - 560 004. Editor : **Radhakrishna Holla S.L.** **Website :** www.hinduseva.org